## ಅಣ್ಣ ರಾಘಣ್ಣ

ಸುಮಾರು ೩೦ ವರ್ಷಗಳ ಹಿಂದೆ ನಮ್ಮ ಚಿಕ್ಕಪ್ಪ ಡಾ। ಬೆಟಗೇರಿ ಕೃಷ್ಣ ಶರ್ಮರನ್ನು ಕುರಿತು 'ಬೆಳುವಲ' ಎಂಬ ಅಭಿನಂದನ ಗ್ರಂಥ ಹೊರಬಂದಿತ್ತು. ಅದಕ್ಕಾಗಿ ನಮ್ಮ ತಂದೆ ದಿ। ಬಲರಾಮಪ್ಪ ಪಾಟೀಲರು 'ನನ್ನ ತಮ್ಮ ಈಶ' ಎಂಬ ಒಂದು ಸುಧೀರ್ಘ ಲೇಖನವನ್ನು ಬರೆದಿದ್ದರು. ಕೃಷ್ಣ ಶರ್ಮರನ್ನು ಮನೆಯಲ್ಲಿ ಪ್ರೀತಿಯಿಂದ 'ಈಶ' ಎಂದು ಕರೆಯುತ್ತಿದ್ದರು. ಬೆಟಗೇರಿ ಊರ ಜನ 'ಈಸಪ್ಪ'– 'ಈಸಣ್ಣ' ಎಂದು ಕರೆಯುತ್ತಿದ್ದರು. ನಾವು ಹುಡುಗರು "ಈಸೂಕಾಕಾ" ಎಂದು ಕರೆಯುತ್ತಿದ್ದವು.

೩೦ ವರ್ಷಗಳ ಒಂದು ಅವಧಿಯನ್ನು ಸಾಮಾನ್ಯವಾಗಿ ಒಂದು ಪೀಳಿಗೆ ಎಂದು ಭಾವಿಸಲಾಗುತ್ತದೆ. ಅಂಥ ಒಂದು ಪೀಳಿಗೆಯ ನಂತರ ರಾಘಣ್ಣನಿಗೆ ಅರವತ್ತು ವರ್ಷಗಳಾಗುತ್ತಿರುವ ಸಂದರ್ಭದಲ್ಲಿ ನಾನು 'ಅಣ್ಣ ರಾಘಣ್ಣ' ಎನ್ನುವ ಲೇಖನ ಬರೆಯಲು ಕುಳಿತಿದ್ದೇನೆ. ಈ ಲೇಖನವನ್ನು ನಾನು ಹೇಗೆ ಬರೆದೇನು ಎಂಬ ಆತಂಕಕ್ಕಿಂತ ನನಗೀ ಸಂಧರ್ಭದಲ್ಲಿ ನಮ್ಮ ಮನೆತನಕ್ಕೆ ಒದಗಿಬಂದ ಈ ಪುಣ್ಯ ವಿಶೇಷವೇ ತುಂಬ ಮಹತ್ವದ್ದಾಗಿ ಕಂಡು ಸಂತೋಷವನ್ನು ಭಾವಾವೇಶವನನ್ನು ಉಂಟುಮಾಡತ್ತಿದೆ.

***

ರಾಘವೇಂದ್ರ ಎಂಬುದು ನಮ್ಮ ಹಿರಿಯರು ಅತ್ಯಂತ ಶ್ರದ್ಧಾಭಕ್ತಿಯಿಂದ ನೆನಪಿಸಿಕೊಳ್ಳುವ ಮಂತ್ರಾಲಯದ ಗುರುಗಳ ಹೆಸರು. ಆದರೆ ನಮ್ಮ ರಾಘಣ್ಣನಿಗೆ ಹೆಸರಿಡುವುದಕ್ಕೆ ಅದೊಂದೇ ಕಾರಣವಾಗಿರಲಿಲ್ಲ. ತೀರಿಹೋದ ಹಿರಿಯರ ಹೆಸರಿಡುವ ಸಂಪ್ರದಾಯದ ಒಂದು ಭಾಗವಾಗಿ ನಮ್ಮ ದೊಡ್ಡಪ್ಪನವರ ಹೆಸರು ಅವನಿಗೆ ಇಡಲ್ಪಟ್ಟಿತ್ತು. ಆದರೆ ಯಾರೂ ಅವನನ್ನು ಆ ಹೆಸರಿನಿಂದ ಕರೆಯುತ್ತರಲಿಲ್ಲ. ನಮಗೆ ನಾವಾರೂ ನೋಡಿರದ ವಿಜಯೇಂದ್ರ ಎಂಬ ಹೆಸರಿನ ಇನ್ನೊಬ್ಬ ಚಿಕ್ಕಪ್ಪ ಇದ್ದರಂತೆ. ತುಂಬ ಪ್ರತಿಭಾವಂತರಾಗಿದ್ದ ಅವರು ೧೯೩೬ ನೇ ಇಸವಿಯಲ್ಲಿ ಎಂ. ಎ ವಿಧ್ಯಾರ್ಥಿಯಾಗಿದ್ದಾಗ ತೀರಿಹೋದರಂತೆ. ಅವರು ಪೂರ್ಣ ಬಾಳು ಬಾಳಿದ್ದರೆ ನಮ್ಮ ಮನೆತನದಲ್ಲಿ ಇನ್ನೊಬ್ಬ ಕೃಷ್ಣ ಶರ್ಮರಾಗಿರುತ್ತಿದ್ದರು

ಎಂದು ನಮ್ಮ ತಂದೆ ಹೇಳುತ್ತಿದ್ದರು. ತೀರ ತಾರುಣ್ಯದಲ್ಲಿಯೇ ಹೊರಟು ಹೋದ ಅವರ ಮೇಲೆ ಒಟ್ಟಾರೆ ಬಹಳ ಭರವಸೆ ಇಡಲ್ಪಟ್ಟಿತ್ತು.

ಈ ವಿಜಯೇಂದ್ರ ಚಿಕ್ಕಪ್ಪನವರನ್ನು ಎಲ್ಲರೂ "ತಮ್ಮಣ್ಣ" ಎಂಬ ಮುದ್ದಿನ ಹೆಸರಿನಿಂದ ಕರೆಯುತ್ತಿದ್ದರಂತೆ. ಈ ವಿಜಯೇಂದ್ರರ ಅಕಾಲಿಕ ಸಾವು ಮನೆತನಕ್ಕೆ ನೀಡಿದ ಆಘಾತದ ಸರಿಸುಮಾರು ೧೫ ವರ್ಷಗಳ ನಂತರ ಹುಟ್ಟಿದ ರಾಘವೇಂದ್ರರಿಗೆ ಎಲ್ಲರೂ ಪ್ರೀತಿಯಿಂದ "ತಮ್ಮಣ್ಣ" ಎಂದು ಕರೆಯಲಾರಂಭಿಸಿದರು. ಅದಾಗಿ ಹೆಚ್ಚು ಕಡಿಮೆ ೩ ವರ್ಷದ ನಂತರ ನಾನು ಹುಟ್ಟಿ, ನಾನು ಮಾತಾಡುವುದನ್ನು ಕಲಿಯುವ ಹೊತ್ತಿಗೆ ಮನೆಯವರ, ಊರಿನವರ, ಬಳಗದವರೆಲ್ಲರೂ ರಾಘಣ್ಣನನ್ನು ಕರೆಯುತ್ತಿದ್ದುದು ತೀರ ಜವಾರಿ ಹೆಸರಾದ ತಮ್ಮಣ್ಣ ಎಂದೇ. ಕೇವಲ ಶಾಲೆಯ ದಾಖಲೆಯಾಗಿ ,
ಹಾಜರಿ ತೆಗೆದುಕೊಳ್ಳುವ ಸರ್ಕಾರಿ ಕ್ರಿಯೆಯ ಸಂಧರ್ಭದಲ್ಲಿ ಮಾಸ್ತರರು ನೆನಪಿಸಿಕೊಳ್ಳುವ ಒಂದು ಹೆಸರಾಗಿ ಮಾತ್ರ ರಾಘವೇಂದ್ರ ಉಳಿದುಕೊಂಡಿತ್ತೇ ಹೊರತು ಉಳಿದಂತೆ ಅವರೂ ಕೂಡ ಕರೆಯುತ್ತಿದ್ದುದು "ಗೌಡರ ತಮ್ಮಣ್ಣ " ಎಂದೇ.

ಆದರೆ ತಮ್ಮಣ್ಣ ಎಂಬ ಮುದ್ದಿನ ಹಾಗೂ ಸಹಜ ಬಳಕೆಯ ಹೆಸರನ್ನು ನಿಷೇಧಿಸಬೇಕಾದ ಒಂದು ಸನ್ನಿವೇಶ ಅನೀರಿಕ್ಷಿತವಾಗಿ ಬಂದುಬಿಟ್ಟಿತು.

ನಮ್ಮ ದೊಡ್ಡಣ್ಣ ಡಾ। ಶಶಿಕಾಂತ ಹುಕ್ಕೇರಿ ತಾಲ್ಲೂಕಿನ ಇಸ್ಲಾಂಪುರವೆಂಬ ಹಳ್ಳಿಯಲ್ಲಿ ಕೆಲಸ ಮಾಡುತ್ತಿದ್ದಾಗ ಒಂದು ಸೋಜಿಗದ ಘಟನೆ ನಡೆಯಿತು. ಯಾರೊ ಒಬ್ಬ ಅಪರಿಚಿತ ವ್ಯಕ್ತಿ ನಮ್ಮ ದೊಡ್ಡಣ್ಣನ ಬಳಿ ಬಂದು– "ನಿಮ್ಮ ಒಬ್ಬ ತಮ್ಮ ತುಂಬಾ ಬುದ್ಧಿವಂತನಿದ್ದು ಆತನಿಂದ ನಿಮ್ಮ ಮನೆತನಕ್ಕೆ ದೊಡ್ಡ ಹೆಸರು ಬರಲಿದೆ. ಆದರೆ ನೀವೆಲ್ಲ ಅವನನ್ನು ನಿಮ್ಮ ತೀರಿಹೋದ ಪ್ರತಿಭಾವಂತ ಹಿರಿಯರ ಹೆಸರಿನಿಂದ ಕರೆಯುತ್ತಿದ್ದೀರಿ. ಆ ರೀತಿ ಕರೆಯುವುದನ್ನು ತಕ್ಷಣ ನಿಲ್ಲಿಸಬೇಕು. ಇಲ್ಲದಿದ್ದರೆ ಅವನಿಗೂ ನಿಮ್ಮ ಮನೆತನಕ್ಕೂ ಅಶುಭವಾಗುತ್ತದೆ" ಎಂಬರ್ಥ ಬರುವ ಮಾತುಗಳನ್ನು ಹೇಳಿ ನಿಲ್ಲದೇ ಹೊರಟುಹೋದನಂತೆ.ಆಮೇಲೆ ಆತನನ್ನು ಊರೆಲ್ಲ ಹುಡುಕಿದರೂ ಆತ ಕಾಣಲಿಲ್ಲ. ಮರುದಿನವೇ ನಮ್ಮ ದೊಡ್ಡಣ್ಣ ಬೆಟಗೇರಿಗೆ ಧಾವಿಸಿ ನಡೆದುದನ್ನು ತಿಳಿಸಿ ಇನ್ನು ಮೇಲೆ ಯಾರೂ 'ಹಾಗೆ' ಕರೆಯಬಾರದೆಂದು

ತಾಕೀತು ಮಾಡಿದ, ಹಾಗೂ ರಾಘವೇಂದ್ರನೆಂಬ ಪ್ರಚಲಿತಲಲ್ಲಿದ ಹೆಸರನ್ನು ಬಳಕೆಗೆ ತರಬೇಕೆಂದು ತಿಳಿಸಿ ತಾನೂ ಬಲುಕಷ್ಟದಿಂದ 'ರಾಘೂ ' ಎಂದು ಕರೆಯುವುದನ್ನು ರೂಢಿಸಿಕೊಂಡ.

ಆದರೆ ಆ ಹೆಸರಿನನಿಂದ  ಹೊರಬರುವುದು ಮನೆಯವರಾದಿಯಾಗಿ ಎಲ್ಲರಿಗೂ ಅಸಾಧ್ಯವೆಂಬಂತೆ ತೋರುತಿತ್ತು. ೧೩–೧೪ ವರ್ಷಗಳಿಂದ ಕರೆದ ಹೆಸರನ್ನು ಬಿಟ್ಟು ರಾಘಣ್ಣ ಎಂದು ಕರೆಯುವುದು ನನಗೂ ತೀರ ಅಸಹಜವಾದ, ನಮ್ಮದಲ್ಲದ ಕ್ರಿಯೆಯಾಗಿ ಬಹುದಿನಗಳವರೆಗೂ ಕಾಡುತಿತ್ತು. ತಪ್ಪಿ –ತಡೆದು 'ತಮ್ಮಣ್ಣ' ಎಂಬ ಹೆಸರು ಬಾಯಿಗೆ ಬಂದಾಗಲೆಲ್ಲ ನಮ್ಮ ದೊಡ್ಡಣ್ಣ  ಕಿವಿ ಹಿಂಡಲು ಸಿದ್ಧನಾಗೇ ಇರುತಿದ್ದ... ನಮ್ಮ ತಂದೆ ಕೂಡ 'ಕೆಟ್ಟದ್ದನ್ನು ಯಾಕೆ ಪರೀಕ್ಷಿಬೇಕು? ತಮ್ಮಣ್ಣ ಅನ್ನದಿದ್ದರಾಯ್ತು' ಎಂದೇ  ಹೇಳುತ್ತಿದ್ದರು. ಅವರಿಗೆ ಈ ಸಮಸ್ಯೆ ತಟ್ಟಿರಲಿಲ್ಲ. ಏಕೆಂದರೆ ಅವರು ತನ್ನೆಲ್ಲ ಮಕ್ಕಳನ್ನು ತಮ್ಮದೆ ಆದ ಬೇರೊಂದು ಹೆಸರಿನಿಂದ ಕರೆಯುತ್ತಿದ್ದರು. ರಾಘವೆಂದ್ರನನ್ನು ಹುಟ್ಟಿದಾಗಿನಿಂದ  ತಮ್ಮ ಕಡೆಯವರೆಗೂ ಅವರು ಕರೆಯುತ್ತಿದ್ದದು 'ಪರಿಮಳಾರ್ಯ' ಎಂಬ ಪಂಚಾಕ್ಷರಿ ಮಂತ್ರದಿಂದಲೆ! ಅದನ್ನು ಎಂಥ ಸಂಧರ್ಭದಲ್ಲೂ ಹ್ರಸ್ವಗೊಳಿಸುತ್ತಿರಲಿಲ್ಲ ಹಾಗೂ ಅಪಭ್ರಂಶಗೊಳಿಸುತ್ತಿರಲಿಲ್ಲ. ಊರ ಜನರಿಗೂ ಶಾಲೆಯ ಹುಡುಗರಿಗೂ ಈ ಹೆಸರಿನ ಬದಲಾವಣೆ ಕಡುಕಷ್ಟದ ವಿಷಯವಾಗಿದ್ದಿತು. ಅವರು 'ತಮ್ಮಣ್ಣ' ಎಂಬ ತಮ್ಮ ನಾಲಗೆಗೆ ರೂಢಿಸಿಕೊಂಡ ಸಹಜ ಹೆಸರಿನಿಂದ ಕರೆದಾಗಲೆಲ್ಲ ನಾವು ಮನೆಯವರು ಹಾಗೆ ಕರೆಯಕೂಡದೆಂದೂ– ರಾಘಣ್ಣ ಎಂದೇ ಕರೆಯಬೇಕೆಂದೂ ಜಬರ್‌ದಸ್ತಿ ಮಾಡುತ್ತಿದ್ದೆವು. ಅಂತೂ ಕಾಲಕ್ರಮೇಣ ತಮ್ಮಣ್ಣ ಎಂಬ ಹೆಸರಿನ ಬಳಕೆ ಹೆಚ್ಚು ಕಡಿಮೆ ನಿಂತೇ ಹೋಯಿತು.

ಈ ಹೆಸರಿನ ಬದಲಾವಣೆಯ ಘಟನೆಯಲ್ಲಿ ನನಗೆ ಒಂದೆರಡು ವಿಶೇಷಗಳು ಗೋಚರಿಸುತ್ತವೆ. ಮೊದಲನೆಯದು – ಹತ್ತಾರು ಮಕ್ಕಳಿರುವ  ಮನೆಯಲ್ಲಿ ಯಾರೋ ಹೇಳಿದರೆಂದು ಅಲಕ್ಷ್ಯಮಾಡದೆ ಹುಡುಗನೊಬ್ಬನ ವ್ಯಕ್ತಿಗತ ಅಭ್ಯುದಯದ ವಿಷಯದಲ್ಲಿ ಕೆಟ್ಟದ್ದರ ಸಾಧ್ಯತೆಯ ಪರೀಕ್ಷೆಯ ಕೆಲಸಕ್ಕೆ ಹೋಗದಿರುವುದು. ಎರಡನೆಯದು – ಮನೆತನಕ್ಕೆ ಒಳ್ಳೆಯ ಹೆಸರು ತರುತ್ತಾನೆಂಬ ವಿಷಯದಲ್ಲಿ ಮನೆಯವರಿಗೆ ಅವನ  ವಿಷಯದಲ್ಲಿದ್ದ ನಂಬಿಕೆ. ಹೋಲಿಕೆಗೆ ಸಲ್ಲದಿದ್ದಾಗಲೂ ಈ ಸಂಧರ್ಭದಲ್ಲಿ ನೆನಪಾಗುವ ಒಂದು ಘಟನೆಯೂ ಮನೆತನದ

ಸ್ಮರಣೆಯಲ್ಲಿದ್ದಿರಬೇಕು. ಬೆಟಗೇರಿ ಕೃಷ್ಣಶರ್ಮರು(ಅವರ ಹಾಗೂ ರಾಘವೇಂದ್ರನ ಜನ್ಮ ದಿನ ಎಪ್ರೀಲ್ ೧೬) ತೀರ ಎಳವೆಯಲ್ಲಿ ಸಾವು–ಬದುಕಿನ ಮಧ್ಯೆ ಹೋರಾಡುತ್ತಿದ್ದಾಗ ಮೂಡಲಗಿಯ ಶ್ರೀ ರಂಗಬೋಧ ಸ್ವಾಮಿಗಳು ' ಈತನಿಗೆ ಏನೂ ಆಗುವುದಿಲ್ಲ. ಈತನಿಂದ ಮನೆತನಕ್ಕೆ ದೊಡ್ಡ ಕೀರ್ತಿ ಲಭಿಸಲಿದೆ' ಎಂದು ಹೇಳಿ ಆಶೀರ್ವದಿಸಿದ್ದರಂತೆ. ಕೃಷ್ಣಶರ್ಮರ ಕಡೆಯ ಕರ್ಮದ ತಯಾರಿಯಲ್ಲಿದ್ದವರು ಈ ಮಾತನ್ನು ನಂಬಿ ' ಆ ಕೆಲಸ' ಗಳನ್ನು ನಿಲ್ಲಿಸಿದರಂತೆ. ಈ ಎರಡು ಸಂಧರ್ಭಗಳಲ್ಲೂ ಈ 'ಹುಡುಗರು ' ಮನೆತನಕ್ಕೆ ಏನನ್ನೋ ನಿಡಲಿದ್ದಾರೆ ಎಂದೇ ಕುಟುಂಬದ ಎಲ್ಲರೂ ನಂಬಿದ್ದರು. ಇನ್ನೊಂದು ಮಾತನ್ನೂ – ಹೇಳಬೇಕು ಅವರ ಈ ನಂಬಿಕೆ ಕೇವಲ ಸಾಹಿತ್ಯಕ – ಸಾಂಸ್ಕೃತಿಕ ಏಳ್ಗೆಯ ಕಲ್ಪನೆಯಾಗಿತ್ತೆ ಹೊರತು ಆಯಾ ಕಾಲಘಟ್ಟಗಳಲ್ಲಿ ಮನೆತನಕ್ಕೆ ತೀರ ಅಗತ್ಯವಾಗಿದ್ದ ಆರ್ಥಿಕ ಚೇತರಿಕೆಯ ನಿರೀಕ್ಷೆಯಾಗಿರಲಿಲ್ಲ. ಇದಕ್ಕೆ ಪೂರಕವಾಗಿ ನಮ್ಮ ಚಿಕ್ಕಂದಿನ ದಿನಗಳನ್ನ ಸಂಕ್ಷಿಪ್ತವಾಗಿ ಹೇಳಿದರೆ ತಪ್ಪಾಗಲಿಕ್ಕಿಲ್ಲ.

ನಮ್ಮ ತಂದೆ ತಾಯಿಯರ ಹತ್ತಾರು ಮಕ್ಕಳಲ್ಲಿ ಶಾಲೆಗೆ ಹೋಗಲಾರಂಭಿಸುವ ವಯಸ್ಸಿನ ಹುಡುಗರಿಂದ ಹಿಡಿದು ಮದುವೆಯಾಗಿ ಮಕ್ಕಳನ್ನು ಹಡೆದ ಹೆಣ್ಣು ಮಕ್ಕಳೂ ಇದ್ದರು. ವೈಯಕ್ತಿಕ ಲಾಲನೆ ಪಾಲನೆ ಕಷ್ಟದ್ದಾದರೂ ಸಾಹಿತ್ಯ, ಸಂಗೀತ, ಸಂಸ್ಕೃತಿ, ಜಾನಪದ, ಕಲೆ ಮುಂತಾದ ವಿಷಯಗಳಲ್ಲಿ ನಿತ್ಯ ಸಾಮೂಹಿಕ ಪ್ರಾತಕ್ಷಿಕೆಯಂತಹ ತರಬೇತಿ ತಂತಾನೆ ನಡೆಯುತಿತ್ತು.ನಮ್ಮ ತಂದೆ ಸುಶ್ರಾವ್ಯವಾಗಿ ಹಾಡುತ್ತಿದ್ದರು–ಮುಖ್ಯವಾಗಿ ದಾಸರ ಪದಗಳು, ಬಯಲಾಟದ ಹಾಡುಗಳು ಹಾಗೂ ತತ್ವಪದಗಳು. ಅವರ ಬಳಿ ದಪ್ಪು–ದಮ್ಮಡಿ ಹಾಗೂ ಕರಡೀಮಜಲು ಕಲಿಯಲು ಊರಿನ ಯುವಕರು ಬರುತ್ತಿದ್ದರು. ಕುಮಾರವ್ಯಾಸ ಭಾರತದ ನೂರಾರು ಪದ್ಯಗಳನ್ನು ಹೇಳಬಲ್ಲವರಾಗಿದ್ದರು. ಹರಿಕಥೆ ಹೇಳುವ ಹವ್ಯಾಸಿ ಕಲೆಯು ಅವರಲ್ಲಿದ್ದಿತು. ಶ್ರೀ ಕೃಷ್ಣ ಪಾರಿಜಾತದ ವಿಷಯವಾಗಿ ಚರ್ಚಿಸಲು ಪಿ.ಎಚ್ ಡಿ ವಿಧ್ಯಾರ್ಥಿಗಳು ಅವರಲ್ಲಿಗೆ ಬರುತ್ತಿದ್ದರು. ನಮ್ಮ ಹಳೆಯ ದೊಡ್ಡ ಮನೆಯ ಯಾವುದೋ ಭಾಗದಿಂದ ದೊಡ್ಡಣ್ಣ– ಅಕ್ಕಂದಿರ ಕಂಠದಿಂದ ಭಾವಗೀತೆಗಳು ಕೇಳಬರುತ್ತಿದ್ದವು. ಮನೆಯ ಹೊರಕಟ್ಟೆಯ ಮೇಲೆ ಹೊಲಿಗೆ ಯಂತ್ರ ಇಟ್ಟುಕೊಂಡಿದ್ದ ಗುರುಸಿದ್ಧ ನಿರಂತರವಾಗಿ 'ನಲಿದು ಬಾರೊ ಮುರಲಿ' ಎಂದೋ 'ಹಾ ನೋಡೆ ಮಧು ವಸಂತವಿದು ಹಾ' ಎಂದು ಬೇಂದ್ರೆ– ಬೆಟಗೇರಿ– ಕುವೆಂಪು ಎನ್ನದೆ

ಭಾವಗೀತೆಗಳನ್ನು; ಭೂ ಕೈಲಾಸ– ಕೃಷ್ಣಗಾರುಡಿ ಮುಂತಾದ ಚಿತ್ರಗಳ ಹಾಡುಗಳನ್ನು ; 'ಹೃದಯ ವ್ಯಥೇ ನಾ ತಾಳೆ ಮಮ ಜನನಿ'... ಮುಂತಾದ ನಾಟಕದ ಪದಗಳನ್ನು ಹಾಡುತ್ತಲೇ ಇರುತ್ತಿದ್ದ. ಎಲ್ಲ ಎರಡೆರಡೆ ಸಾಲುಗಳು! ಸಾಯಂಕಾಲವಾದೊಡನೆ 'ಶಾಸ್ತ್ರೀ ಭೀಮಪ್ಪ' –'ಸದ್ಗುರು ನಾಥನ್ಹೊರತು ಗತಿ ಬ್ಯಾರಿಹುದೆ' ಮತ್ತು 'ನಾನೇನು ಮಾಡಿದ್ದೆನೋ ರಂಗಯ್ಯ ರಂಗ ನೀ ಎನ್ನ ಕಾಯ ಬೇಕೋ' ಎಂಬ ಪದಗಳನ್ನು ಕಲಿಯಲು ಬರುತ್ತಿದ್ದ. ಈ ವೈಭವದೊಡನೆ ಗೌಡಿಕೆ ಬೇರೆ ಇದ್ದಿತು. ಮನೆಯಲ್ಲಿ ಆಗಾಗ ನ್ಯಾಯ ನಿರ್ಣಯಗಳಾಗುತ್ತಿದ್ದವು.ಹಾಲು ಹೈನು ಹಬ್ಬ ಹರಿದಿನಗಳಿಂದ ಉಣ್ಣಲು ಕೊರತೆ ಇರಲಿಲ್ಲ. ಆದರೆ ಹಣವನ್ನು ಬೇಡುವ ಉಡುಗೆಯ ವಿಷಯದಲ್ಲಿ ಕೊಂಚ ಕೊರತೆ ಇದ್ದಿತು. ದೊನ್ನೆಯಲ್ಲಿ ತುಪ್ಪ ಹಾಕಿಸಿಕೊಂಡು ಊಟ ಮಾಡುವ ಪುರೋಹಿತರಿಗೆ ನಂತರದಲ್ಲಿ  ಒಂದಾಣೆ ದಕ್ಷಿಣೆಗೆ ಕೊರತೆ ಇರುತ್ತಿತ್ತು. ಒಟ್ಟಾರೆ ಸಾಂಸ್ಕೃತಿಕ ಸಿರಿವಂತಿಕೆಯೇ ಮುಂದಾಗಿ ಹಣದ ಸಿರಿವಂತಿಕೆ ನಂತರದ ಸ್ಥಾನ ಪಡೆಯುತ್ತಿತ್ತು. ಹಳ್ಳಿಯಲ್ಲಿ ನಡೆಯುವ ಪ್ರತಿಯೊಂದು ಆಗುಹೋಗುಗಳು ನಮ್ಮನ್ನು ಪ್ರಭಾವಿಸುತ್ತಿದ್ದವು. ಶ್ರೀಕೃಷ್ಣಪಾರಿಜಾತ, ನಿಜಗುಣಿ,ಸಂಗ್ಯಾ ಬಾಳ್ಯಾ ನೋಡಿದ ಹಲವಾರು ದಿನ ಅವುಗಳ ಮಾತು ಹಾಗೂ ಹಾಡುಗಳ ಗುಂಗಿನಲ್ಲಿರುತ್ತಿದೆವು. ಊರಲ್ಲಿ ನಾಟಕ ಕಂಪನಿಗಳು ಬಂದರೆ ನಾವು ಚಂದದ ಸೀರೆಗಳ ಪಡದೆ ಮಾಡಿ ಕಟ್ಟೆಯ ಮೇಲೆ ನಾಟಕ ಮಾಡುತ್ತಿದ್ದೆವು. ಊರ ಜಾತ್ರೆಯನ್ನನುಕರಿಸಿ ಹಿತ್ತಲಲ್ಲಿ ಪುಟ್ಟ ಗುಡಿಗಳನ್ನು ಕಟ್ಟಿ ಪುಟ್ಟ ರ‌ಥ ಎಳೆಯುತ್ತಿದ್ದೆವು. ಅಲ್ಲಿಯಂತೆ ನಾವೂ ಗುಡಿಯ ಮುಂದೆ ಒಲೆ ಹೂಡಿ ಅನ್ನ ಮಾಡಲೆಳಸುತ್ತಿದ್ದೆವು. ತೋಟಗಳಲ್ಲಿ ಹತ್ತಿ ಗೋವಿನ ಜೋಳದ ಬೀಜ ನೆಡುವುದನ್ನು ನೋಡಿ ನಾವೂ  ಹಿತ್ತಲಲ್ಲಿ ನೆಟ್ಟು ನೀರು ಹನಿಸುತ್ತಿದ್ದೆವು. ಅವು ಮೊಳಕೆಯೊಡೆಯುವುದನ್ನು ಕಾಣಲು ಪ್ರತಿದಿನ ಎದ್ದ ತಕ್ಷಣ ಅಲ್ಲೇ ಬಂದು ಬಹಳ ಹೊತ್ತು ಕುಳಿತುಕೊಳ್ಳುತ್ತಿದ್ದೆವು.

ಮನೆತನದ ಇನ್ನೊಂದು ಹುಚ್ಚು  ಪಗಡೆಯಾಟ. ನವರಾತ್ರಿ ಅಮವಾಸ್ಯೆಯಿಂದ ತುಳಸೀ ಮದುವೆಯವರೆಗೆ ರಾತ್ರಿ ೯ ರಿಂದ ೧೨–೧ ಗಂಟೆಯವರೆಗೆ ಮನೆಯ ಎಲ್ಲ ಜನ, ರೈತಾಪಿ ವರ್ಗ ಸೇರಿ ಪಗಡೆಯಾಡುತ್ತಿದ್ದೆವು. ತಲೆ ತಲಾಂತರದಿಂದ ಬಂದ ಪಕ್ಷಗಳು! ಪಕ್ಷಾಂತರ ಇಲ್ಲವೇ ಇಲ್ಲ! ಪಗಡೆಯಾಟದ ಹುರುಡು–ಜಗಳ–ಕುಣಿತ–ಕೇಕೆ– ತೆಗಳುವಿಕೆ– ಚುಚ್ಚು ಪದಗಳು ಅದ್ಭುತ ಲೋಕವನ್ನೆ ತೆರೆಯುತ್ತಿದ್ದವು. ಇದರ ಕುರಿತಾಗಿ ಬಹಳಷ್ಟು ಬರೆಯಬಹುದಾದರು ಈ ಸಂಧರ್ಭದಲ್ಲಿ ಮಿತಿಗೊಳಿಸಬೇಕಾಗಿದೆ. ಒಂದು ಮಾತು ಮಾತ್ರ ಹೇಳಲೇ ಬೇಕು. ನಮ್ಮ ತಂದೆ

ತಾಯಿ, ಅಕ್ಕ ತಂಗಿಯರು ನಾವು ಅಣ್ಣ ತಮ್ಮಂದಿರು ಸವಿದ ಈ ಆಟದ ರುಚಿ ಮರೆಯಲಾಗದಂತದು.

ನಾನು ಈಗಾಗಲೇ ಹೇಳಿದಂತೆ ಪ್ರತಿ ವಿಷಯವೂ ನಮ್ಮನ್ನು ಪ್ರಭಾವಿಸುತ್ತಿತ್ತು. ಒಂದು ಸಾರಿ ಊರಿಗೆ ಬಂದ ಸರ್ಕಸ್ ನೋಡಿದ ನಾವು ಊರ ಹಳ್ಳದ ದಂಡೆಯ ಎತ್ತರದ ಜಾಗದಿಂದ ಕೆಳಕ್ಕೆ ಹಾರುವುದೆಂದು ನಿರ್ಧರಿಸಿದೆವು. ಸಣ್ಣ ಹುಡುಗರಾದ ನಾವು ಒಬ್ಬೊಬ್ಬರೇ ಹಾರಿದೆವು ಕೂಡ.ನಮಗೆ ಸಣ್ಣ ಪುಟ್ಟ ನೋವುಗಳಾದವು. ಆದರೆ ರಾಘಣ್ಣ ಹಾರುವಾಗ ಒಂದಿಷ್ಟು ಕಾಲು ಊರದೇ ಧಪ್ಪೆಂದು ಕುಳಿತಿದ್ದರಿಂದಲೋ ಏನೋ ಅವನ ಟೊಂಕ ಬೆನ್ನುಗಳಲ್ಲಿ 'ಚಳಕ್' ಎಂದಂತಾಗಿ ಇಂದಿಗೂ ಕೂಡ ಅದರ ಅಂಶ ಉಳಿದುಕೊಂಡಿದೆ. ಈ ಸಾಹಸದ ಜೊತೆಗೆ ಕೊಂಚ ಭಿನ್ನವಾದ ಇನ್ನೊಂದನ್ನು ಹೇಳಲೇಬೇಕು. ನಮ್ಮ ಅಕ್ಕ ತಾಯಕ್ಕನಿಗೆ ನಬಾಪುರದ ಮಹಿಳಾ ಕಲ್ಯಾಣ ಕೇಂದ್ರದಲ್ಲಿ ಒಂದು ನೌಕರಿ ಸಿಕ್ಕು ಅವಳಿಗೆ ಜೊತೆಯಗಿ ಇರುವುದಕ್ಕೆ ನಾನು ರಾಘಣ್ಣ ಹೋಗಬೇಕಾಯಿತು. ನನಗಾಗ ೬ ವರ್ಷ.ರಾಘಣ್ಣನಿಗೆ ೯ ವರ್ಷ. ೩–೪ ತಿಂಗಳಲ್ಲೇ, ಚಿಕ್ಕವರಾದ ನಮಗೆ ತಂದೆ ತಾಯಿಯರನ್ನು ಬಿಟ್ಟಿರುವುದು ಕಷ್ಟವಾಯಿತು. ಒಂದು ದಿನ ಅಕ್ಕ ಹೊರಗಡೆ ಹೋಗಿದ್ದಾಗ ನಾವು ಕಿರಾಣಿ ಸಾಮಾನು ತರುತ್ತಿದ್ದ ಭಾಗೋಜಿ ಎಂಬುವವರ ಅಂಗಡಿಯಲ್ಲಿ ಒಂದು ರೂಪಾಯಿ ಇಸಿದುಕೊಂಡು ಬಸ್ಸು ಹತ್ತಿ, ಹೇಳದೆ ಕೇಳದೇ ಗೋಕಾಕದ ಇನ್ನೋರ್ವ ಅಕ್ಕನ ಮನೆಗೆ ಬಂದು ಬಿಟ್ಟೆವು. ಚಿಕ್ಕ ಊರಾದ ನಬಾಪುರದಲ್ಲಿ ನಾವು ಬಸ್ಸು ಹತ್ತಿದ ವಿಷಯ, ಅಕ್ಕನಿಗೆ ಗೊತ್ತಾಗಿ ಅವಳೂ ಗೋಕಾಕಕ್ಕೆ ಬಂದು....ಒಟ್ಟಾರೆ ದೊಡ್ಡಣ್ಣನಿಂದ ಕಿವಿ ಹಿಂಡಿಸಿಕೊಂಡೆವು. ಆದರೆ ನಮ್ಮನ್ನು ಪುನಃ ನಬಾಪುರಕ್ಕೆ ಕಳುಹಿಸದೇ ಬೆಟಗೇರಿಯ ಶಾಲೆಗೆ ಸೇರಿಸಿದರು. ನಮ್ಮ ಆಸೆ ಈಡೇರಿತು.

****

ನಮಗೆಲ್ಲರಿಗೂ ಮನೆಯ ಪರಿಸರದ ಸುಖ – ಸಂತೋಷ ತರಬೇತಿ – ಸಮಾನವಾಗಿ ದೊರೆತದ್ದು. ಆದರೆ ನಮ್ಮ ನಮ್ಮ ಬೊಗಸೆಗಳ ಅಳತೆ ಭಿನ್ನ ಭಿನ್ನ. ಅದರಲ್ಲೇ ನಾವು ಸಾಕಷ್ಟು ಸಂತೋಷ ಪಟ್ಟದ್ದು ಸುಳ್ಳಲ್ಲ. ಆದರೆ ಈ ಹಿನ್ನೆಲೆಯನ್ನು ಸಾಕಷ್ಟು ಹೀರಿ, ಬೆಳೆದು ಸಾಹಿತ್ಯವನ್ನಾಗಿ ಪರಿವರ್ತಿಸುವ ಮನಸ್ಸು ಮಾಡಿ ಅದರಲ್ಲಿ ಯಶಸ್ವಿಯಾದದ್ದು ರಾಘಣ್ಣ ಮಾತ್ರ. ಶಾಲೆಯ ದಿನಗಳಲ್ಲೂ ಆತ ವಿಭಿನ್ನನಾಗಿದ್ದ. ಮಾಸ್ತರರು ತಪ್ಪು ಹೇಳಿದರೆ ಅವರೊಂದಿಗೆ ವಾದಿಸುತ್ತಿದ್ದ.ವಿಶೇಷವಾಗಿ ಕನ್ನಡ ವಿಷಯದಲ್ಲಿ ವಾದಿಸಿಗೆಲ್ಲಬಹುದಾದ ವಾತಾವರಣ ಮನೆಯಿಂದಲೇ ಸಿಗುತ್ತಿತ್ತು.

ಮಾಸ್ತರರೊಂದಿಗೆ ವಾದಿಸಬಾರದೆಂದು ಮನೆಯಲ್ಲಿ ಯಾರೂ ಹೇಳುತ್ತಿರಲಿಲ್ಲ. ಬದಲಾಗಿ ಸರಿಯಾದ ವಾದಕ್ಕೆ ಪ್ರೋತ್ಸಾಹವಿರುತ್ತಿತ್ತು. ಮಮದಾಪುರದಲ್ಲಿ ಅದೇ ಆಗ ಹೈಸ್ಕೂಲ್ ಆರಂಭವಾಗಿತ್ತು. ರಾಘಣ್ಣ ಅಲ್ಲಿ ಉತ್ಸಾಹದಿಂದ ೮ ನೇ ತರಗತಿಗೆ ಹೆಸರು ಹಚ್ಚಿ ಬಂದ. ಆರಂಭದ ಕೆಲದಿನ ೪-೫ ಮೈಲು ನಡೆದುಕೊಂಡು ಹೋದ. ಕೆಲ ಸಾರಿ ಸೈಕಲ್ಲು ಇರುತ್ತಿತ್ತು. ಆದರೆ ಮುಂದೆ ನಮ್ಮ ದೊಡ್ಡಣ್ಣ ಅಲ್ಲೇ ಮನೆ ಮಾಡಿದ್ದರಿಂದ ನಾವೆಲ್ಲ ಮಮದಾಪುರದಲ್ಲೇ ಶಾಲೆಗೆ ಸೇರಿದೆವು. ಮಮದಾಪುರದಲ್ಲಿದ್ದಷ್ಟು ದಿನವೂ ಆತ ಮೊದಲ ಸ್ಥಾನದಲ್ಲಿದ್ದುದರಿಂದ ಸಹಜವಾಗಿ ಮನೆಯಲ್ಲಿ ಅವನ ಬಗೆಗಿನ  ನೀರಿಕ್ಷೆಗಳು ಇನ್ನೂ ಹೆಚ್ಚಾದವು. ಹತ್ತನೇ ತರಗತಿಗೆ ಆತ ಗೋಕಾಕದ ಮುನಿಸಿಪಲ್ ಹೈಸ್ಕೂಲ್ ಸೇರುವ ಇಚ್ಛೆ ವ್ಯಕ್ತಪಡಿಸಿದಾಗ ಮನೆಯವರು ಒಪ್ಪಿಕೊಂಡರು.ಅಲ್ಲಿ ಅವನು ಹೆಸರಾಂತ ಕಾದಂಬರಿಕಾರರಾದ ಶ್ರೀ ಕೃಷ್ಣಮೂರ್ತಿ ಪುರಾಣಿಕ ಅವರ ಶಿಷ್ಯನಾದ.

ಆ ಕಾಲದಲ್ಲಿ ಎಸ್.ಎಸ್.ಎಲ್.ಸಿ., ದೊಡ್ಡ ಪರೀಕ್ಷೆಯೇ. ಅದರಲ್ಲಿ ರಾಘಣ್ಣ ಗರಿಷ್ಠ -ಅಂದರೆ ವಾರ್ಷಿಕ ೭೨೦ ರೂ ಬರುವ ಲೋನ್ ಸ್ಕಾಲರ್‌ಶಿಪ್ ಪಡೆಯುವಷ್ಟಾದರೂ ಅಂಕ ಪಡೆಯಬೇಕೆಂಬುದು ನಮ್ಮ ದೊಡ್ಡಣ್ಣನ ಅಪೇಕ್ಷೆ. ಆತ ತನ್ನ ಒಳ್ಳೆಯ ಹಳೆಯ ಪ್ಯಾಂಟ್‌ಗಳನ್ನು ನಮ್ಮ ಮನೆಯಲ್ಲೆ ಯಂತ್ರವಿರಿಸಿಕೊಂಡಿದ್ದ ಗುರುಸಿದ್ಧನಿಂದ ರಾಘಣ್ಣನಿಗೆಂದು ಮುತುವರ್ಜಿ ವಹಿಸಿ ಅಲ್ಟ್ರೇಶನ್ ಮಾಡಿಸಿಕೊಡುತ್ತಿದ್ದ. ಆಗಾಗ ಎಸ್.ಎಸ್.ಎಲ್.ಸಿ.ಯಲ್ಲಿ ಎಷ್ಟು ಅಂಕ ಬರಬಹುದೆಂದು ಕೆಳುತ್ತಿದ್ದ. ರಾಘಣ್ಣನ ಕ್ಲಾಸಿನಲ್ಲಿ  ಅವನ ಪ್ರತಿಸ್ಪರ್ಧಿಯಂತಿದ್ದ ಖೋಜಾ ಎಂಬ ವಿಧ್ಯಾರ್ಥಿಗಿಂತ ಹೆಚ್ಚು ಅಂಕ ಪಡೆಯುವಂತೆ ಹುರಿದುಂಬಿಸುತ್ತಿದ್ದ. ಖೋಜಾನಿಗೆ ಕೆಲ ಮಾಸ್ತರುಗಳು ಅನುಚಿತ ಬೆಂಬಲ ನೀಡುತ್ತಾರೆಂಬ ವಿಷಯ ಮನೆಯಲ್ಲಿ ಚರ್ಚೆಗೆ ಬಂದಾಗಲೆಲ್ಲ, ನಾವು ಸಣ್ಣವರು, ನೋಡದಿರುವ ಆ ಖೋಜಾನನ್ನು ಮನಸ್ಸಿನಲ್ಲೆ ಬೈದುಕೊಳ್ಳುತ್ತಿದ್ದೆವು.

ರಾಘಣ್ಣ ಎಸ್.ಎಸ್.ಎಲ್.ಸಿ.ಯಲ್ಲಿ ಶೇ. ೭೧ ಕ್ಕಿಂತ ಹೆಚ್ಚು ಅಂಕ ಪಡೆದಂತೆ ನೆನಪು. ಅಂದು ಅದು ಬಹು ಒಳ್ಳೆಯ ಪೇರಿಕೆ. ೭೮-೮೦ಕ್ಕೆಲ್ಲ ರ್‍ಯಾಂಕ್ ಬರುತ್ತಿತ್ತು. ನಿರೀಕ್ಷೆಯಂತೆ ರೂ ೭೨೦ ರ ಲೋನ್ ಸ್ಕಾಲರ್ಶಿಪ್ ದೊರಕಿತು. ಅಂದು ಕೂಡ ಜಾತೀಯತೆಯ ಭಯ ಇದ್ದೇ ಇದ್ದಿತು. ನಮ್ಮ ದೊಡ್ಡಣ್ಣ ಸ್ಕಾಲರ್‌ಶಿಪ್ ಅರ್ಜಿಗೆಂದು ರಾಘಣ್ಣನ ಪೋಟೋ ತೆಗೆಸುವಾಗ ವಿಭೂತಿ ಬಳಿಸಿ ಗಾಂಧೀ ಟೊಪ್ಪಿಗೆ ಹಾಕಿಸಿ ಅವನ ಮುಖದಲ್ಲಿ ಬ್ರಾಹ್ಮಣ್ಯ ಕಾಣದಂತೆ ವ್ಯವಸ್ಥೆ ಮಾಡಿದ್ದ. ಅಷ್ಟು

ಒಳ್ಳೆಯ ಅಂಕ ಇರುವಾಗ ಇಂಥದರ ಅಗತ್ಯ ಇರಲಿಲ್ಲವೆಂದು ನನಗೆ ಈಗ ತೋರುತ್ತದಾದರೂ ಮನೆತನಕ್ಕಿದ್ದ ಆತಂಕ ಕಾಳಜಿಗಳ ಅರ್ಥವೂ ಆಗುತ್ತದೆ.

ರಾಘಣ್ಣನಿಗೆ ಮೆಡಿಕಲ್ ಓದಬೇಕೆಂಬ ಅತಿಯಾದ ಆಸೆ ಇದ್ದಿತು. ಆಗ ರಾಜ್ಯದಲ್ಲಿ ಕೇವಲ ೨–೩ ವೈದ್ಯಕೀಯ ಶಿಕ್ಷಣ ನೀಡುವ ಕಾಲೇಜುಗಳಿದ್ದವು. ನಮ್ಮ ಒಬ್ಬ ಭಾವ ಆಗ ತಕ್ಕಮಟ್ಟಿಗಿನ ಪ್ರಭಾವಿವ್ಯಕ್ತಿಗಳಾಗಿದ್ದರು. ಏಳು ಸಾವಿರ ವ್ಯವಸ್ಥೆ ಮಾಡಿದರೆ ಸೀಟು ಕೊಡಿಸುವುದಾಗಿ ಹೇಳಿದ್ದರು. ಆದರೆ ಏಳುಸಾವಿರ ಇಂದಿನ ಏಳುಕೋಟಿಯಂತೆ ಮನೆಯವರಿಗೆ ಕಂಡಿದ್ದಿತು.ಜೊತೆಗೆ ಜಾತಿ ಬೇರೆ ಕಾಡಿತು. ಅಂತೂ ವೈದ್ಯಕೀಯ ಶಿಕ್ಷಣ ರಾಘಣ್ಣನಿಗೆ ಸಾಧ್ಯವಾಗಲಿಲ್ಲ. ಈಗಲೂ ಆತನ ಮನಸ್ಸಿನಲ್ಲಿ ಅದು ಉಳಿದುಕೊಂಡಂತಿದೆ.

ಕಾಲೇಜಿನ ದಿನಗಳಲ್ಲಿ ರಾಘಣ್ಣನನ್ನು ನೋಡಿದವರಿಗೆ ಆತ ಒಬ್ಬ ಜಾಣ ವಿಧ್ಯಾರ್ಥಿಯಂತೆ ಕಾಣುತ್ತಿದ್ದನೆ ಹೊರತು ಅವನಲ್ಲಿ ಓರ್ವ ಸಾಹಿತಿಯನ್ನು ಕಲ್ಪಿಸಲಾಗುತ್ತಿರಲಿಲ್ಲ. ಕಾಲೇಜಿನಲ್ಲಿ ಮೇಷ್ಟ್ರುಗಳಿಂದ ಗುರುತಿಸಿಕೊಂಡು, ಸಾಧ್ಯವಾದಷ್ಟು ಒಳ್ಳೆಯ ಬಟ್ಟೆ ಹಾಕಿಕೊಂಡು ಅಂದಿನ ಯುಗಧರ್ಮದಂತೆ ರಾಜೇಶ್ ಖನ್ನಾನನ್ನು ಇಷ್ಟಪಡುತ್ತ, ಎಲ್ಲರಂತೆ ಸಹಜವಾಗಿದ್ದ. ಆದರೆ ನಮ್ಮ ಮನೆತನದ ಮೂಲ ಹವ್ಯಾಸವಾದ ಸಾಹಿತ್ಯ ಕೃತಿಗಳನ್ನು ಓದುವುದು ಇದ್ದೇ ಇದ್ದಿತು. ಹಾಗೆ ನೋಡಿದ'ರೆ ಆತನ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಯ ದಿನಗಳಲ್ಲಿಯೇ ಆತ ಸಾಹಿತಿಯಾಗುವ ಒಂದಿಷ್ಟು ಗುರುತುಗಳನ್ನು ಹೊರಚಲ್ಲಿದ್ದ... ತನ್ನ ೭–೮ ನೇ ತರಗತಿಯ ವಯಸ್ಸಿನಲ್ಲಿ ಆತ ಬೇಸಿಗೆಯ ರಜೆಗೆಂದು ಗೋಕಾಕಕ್ಕೆ ಹೋದಾಗ 'ಅನರ್ಥ' ಎಂಬ ಕಥೆ ಬರೆದಿದ್ದ. ಅವನೊಂದಿಗೆ ನಮ್ಮಕ್ಕನ ಇಬ್ಬರು ಮಕ್ಕಳೂ ಕಥೆ ಬರೆದಿದ್ದರು. ಈ ಕಥೆಗಳನ್ನು ಮನೆಗೆ ಯಾರೇ ಬಂದರೂ ಮತ್ತೆ ಮತ್ತೆ ಓದಿಸುತ್ತಿದ್ದರು. ಈ ಕಥೆಗಳಿಗೆ ಇವರೆಲ್ಲ ಲಿಪಿಕಾರರು ಮಾತ್ರ ಆಗಿದ್ದರು. ಬೇರೆ ಯಾರೊ ಎಲ್ಲಿಯವರೋ ವೀರನಾರಾಯಣರು! ಹಾಗೇ 'ಕೊಡುಗೆ' ಎಂಬ ಒಂದು ಸಣ್ಣ ನಾಟಕ ಬರೆದದ್ದು ನನಗೆ ನೆನಪಿದೆ. ಪ್ರಾಯಶಃ ರಾಘಣ್ಣನಿಗೆ ನೆನಪಿರಲಿಕ್ಕಿಲ್ಲ. ಅದರಲ್ಲಿ ರಂಗಣ್ಣ ಎಂಬ (ಸ್ವಾತಂತ್ರ್ಯ) ಹೋರಾಟಗಾರನಿಗೆ ನಾಟಕದ ಕೊನೆಗೆ ಬೇಡಿಯ 'ಕೊಡುಗೆ' ದೊರಕುತ್ತದೆ. ವಯಸ್ಸಿನ ಲೆಕ್ಕದಲ್ಲಿ ಅದು ಒಳ್ಳೆಯ ಬರವವಣಿಗೆಯೇ ಆಗಿತ್ತು. ಆದರೆ ರಾಘಣ್ಣ ೯ನೆ ತರಗತಿಯಲ್ಲಿದ್ದಾಗ ಬರೆದ 'ನಿಜಗಲ್ಲಿನ ರಾಣಿ' ಎಂಬ ನಾಟಕದಲ್ಲಿ ಅವನ ಸಾ'ಮರ್ಥ್ಯದ ಸ್ಪಷ್ಟ ಸೂಚನೆಗಳಿದ್ದವು. ಅದನ್ನು ಬಾನುಲಿ ಸ್ಪರ್ಧೆಗೂ ಕಳಿಸಿದ್ದ. ಆದರೆ ಹಿರಿಯರೆಲ್ಲ

ಭಾಗವಹಿಸಿದ್ದ ಅದರಲ್ಲಿ ಬಹುಮಾನ ನಿರೀಕ್ಷಿಸುವಂತಿರಲಿಲ್ಲ. ನಮ್ಮ ಚಿಕ್ಕಪ್ಪ ಬೆಟಗೇರಿ ಕೃಷ್ಣಶರ್ಮರು ಅವನ ಬರವಣಿಗೆಯ ಬಗೆಗೆ ಮೆಚ್ಚುಗೆಯ ಮಾತುಗಳನ್ನು ಹೇಳಿದ್ದರು.

****

ನಮ್ಮ ಮನೆತನ ಮಲ್ಲಾಡಿಹಳ್ಳಿಗೆ, ವಿಶೇಷವಾಗಿ ಅನಾಥಸೇವಾಶ್ರಮಕ್ಕೆ ಹಾಗೂ ದಿವಂಗತ ಸ್ವಾಮೀಜಿಯವರಿಗೆ ಯಾವಾಗಲೂ ಕೃತಜ್ಞವಾಗಿರಬೇಕು. ಎಂ.ಎಸ್‌ಸಿ., ಮುಗಿಸಿ ಫಲಿತಾಂಶಕ್ಕಾಗಿ ಕಾಯುವಾಗಲೇ ನಮ್ಮ ತಂದೆ ರಾಘಣ್ಣನನ್ನು ಒಂದೆರಡು ಕಡೆ ಸಂದರ್ಶನಕ್ಕೆ ಕರೆದೊಯ್ದರು. ಸಂದರ್ಶಕರೊಬ್ಬರು 'ಮುಲ್ಕಿ(ಅಂದರೆ ೭ನೆಯ ತರಗತಿ) ಆಗಿದೆಯಾ?' ಎಂದೂ ಕೇಳಿದ್ದರಂತೆ! ಇಡೀ ಉತ್ತರ ಕರ್ನಾಟಕದಲ್ಲಿ ಖಾಸಗೀ ಶಿಕ್ಷಣ ಸಂಸ್ಥೆಗಳ ಜಾತಿ ಮೀರದ ಕಾರ್ಯಭಾರ! ಜೊತೆಗೆ ಸರಕಾರಿ ಕೆಲಸ 'ನಮಗೆ' ಖಂಡಿತ ಸಿಕ್ಕುವುದಿಲ್ಲವೆಂಬ ನಂಬಿಕೆ. ಅಂಥದರಲ್ಲಿ ದೂರದ, ನೋಡದ ಕೇಳದ ಊರಾದ ಮಲ್ಲಾಡಿಹಳ್ಳಿಯಿಂದ ಬಂದ ಸಂದರ್ಶನ ಸೂಚನೆಗೆ ಓಗೊಟ್ಟು ಹೋಗಿ, ಬರುವಾಗ ಉದ್ಯೋಗದ ಆದೇಶವನ್ನು ಕೈಯಲ್ಲಿ ಹಿಡಿದುಕೊಂಡೆ ಬರುವುದೆಂದರೆ! ಅದೂ ಪೂರ್ತಿ ಸಂಬಳ ಕೈಗೆ ಕೊಡುವಂತಹ ಸಂಸ್ಥೆಯಲ್ಲಿ ಎಂ.ಎಸ್‌ಸಿ., ಪರೀಕ್ಷೆಯ ಪರಿಣಾಮ ಬರುವ ೮-೧೦ ದಿನ ಮೊದಲೇ!

ಮಲ್ಲಾಡಿಹಳ್ಳಿ ಕೊಟ್ಟ ಕೆಲಸಕ್ಕಾಗಿ ಮಾತ್ರ ನಾವು ಕೃತಜ್ಞರಾಗುವಂಥದ್ದಾಗಿರಲಿಲ್ಲ.ನಮ್ಮ ಮನೆಯ ಒಂದು ದೊಡ್ಡ ಶಾಖೆಯೇ ಅಲ್ಲಿ ಆರಂಭವಾಯಿತು.ದೊಡ್ಡ ಜವಾಬ್ದಾರಿಯನ್ನು ಅದು ವಹಿಸಿಕೊಂಡಿತು.ನಮ್ಮ ತಮ್ಮಂದಿರು,ಅಣ್ಣ ತಮ್ಮಂದಿರು,ಅಕ್ಕನ ಮಕ್ಕಳು,ಹಾಗೇ ಅತ್ತಿಗೆಯ ಅಣ್ಣ-ತಮ್ಮಂದಿರ,ಅಕ್ಕ ತಂಗಿಯರ ಮಕ್ಕಳು ಅಲ್ಲೇ ಇದ್ದುಕೊಂಡು ಓದಿದರು.ಕೆಲವರಂತೂ ತುಂಬ ಚನ್ನಾಗಿ ಓದಿ ಒಳ್ಳೆಯ ಜೀವನ ರೂಪಿಸಿಕೊಂಡರು.ನಮ್ಮ ಮನೆತನದ ದೊಡ್ಡ ರಥ ಎಳೆದವರಲ್ಲಿ ನಮ್ಮ ಅಕ್ಕಂದಿರಿಗೂ ಬಹು ಮುಖ್ಯ ಸ್ಥಾನವಿದೆ. ತಮ್ಮ ಮದುವೆಯವರೆಗೂ ಕುಟುಂಬವನ್ನು ಆರ್ಥಿಕವಾಗಿ ಮುನ್ನಡೆಸಿದ್ದಾರೆ. ರಾಘಣ್ಣಗೆ ಕೆಲಸ ಸಿಕ್ಕಿದ ನಂತರ ಆತ ನಮ್ಮ ದೊಡ್ಡಣ್ಣ-ಅತ್ತಿಗೆಯರ ಜವಾಬ್ದಾರಿಯಲ್ಲಿ ಸಿಂಹಪಾಲು ಪಡೆದುಕೊಂಡ. ನಾನು ನನ್ನ ತಮ್ಮ ಬೆಳಗಾವಿಯಲ್ಲಿ ಓದುತಿದ್ದಾಗ ರಾಘಣ್ಣ ತನ್ನ ಮೊದಲ ಸಂಬಳ(ರೂ ೪೭೧) ದಲ್ಲಿ ೨೦೦ ರೂಗಳ ಡಿಡಿ ಕಳಿಸಿ,ಚನ್ನಾಗಿ ಓದಿರಿ, ಹಾಲು ಕುಡಿಯಿರಿ,ಹಣ್ಣು ತಿನ್ನಿರಿ ಎಂದು ಬರೆದದ್ದು ನೆನಪಿದೆ. ಆ ಮೊದಲು ಅಷ್ಟು ಹಣವನ್ನು ನಾನೆಂದೂ ಇಟ್ಟುಕೊಂಡವನಲ್ಲ. ೨೭ ಪೈಸೆಗೆ

ಕಾಲು ಲೀಟರಿನ ನಂದಿನಿ ಹಾಲಿನ ಬಾಟಲು ಬರುತಿತ್ತು. ಇಬ್ಬರಿಗೆ ದಿನಕ್ಕೆ ೫೪ ಪೈಸೆಯಂತೆ ತಿಂಗಳಿಗೆ ೧೬-೧೮ ರೂಪಾಯಿಗಳನ್ನು ಹಾಲಿಗೆಂದೇ ಖರ್ಚು ಮಾಡಿದೆವು. ೧೦-೧೨ ರೂ ಖರ್ಚು ಮಾಡಿ ಆವರೆಗೂ ಬಳಸದ ಹಲ್ಲುಜ್ಜುವ ಬ್ರಶ್, ಪೇಸ್ಟ್ ಹಾಗೂ ಇನ್ನಿತರ ಕೆಲ ವಸ್ತುಗಳನ್ನು ಕೊಂಡು ತಂದೆವು. ಹಾಸ್ಟಲ್ ಹಣ(ರೂ.೧೪೦) ಕೊಟ್ಟ ಮೇಲೂ ನಮ್ಮಲ್ಲಿ ಹಣ ಮಿಕ್ಕಿದ್ದರಿಂದ ಮುಂದಿನ ತಿಂಗಳಿನಿಂದ ಕಡಿಮೆ ಹಣ ಕಳಿಸಿದರೆ ಸಾಕೆಂದು ಪತ್ರ ಬರೆದೆ.

****

ಮಲ್ಲಾಡಿಹಳ್ಳಿಯನ್ನು ನಾವು ನೆನಪಿಸಿಕೊಳ್ಳುವುದು ಇನ್ನೂ ಹೆಚ್ಚಿನ ಕಾರಣಕ್ಕಾಗಿ. ಸೃಜನಶೀಲತೆಯನ್ನು ಒಡಲೊಳಗಿಟ್ಟುಕೊಂಡು ಅರಿವಿಲ್ಲದಂತಿದ್ದ; ಒಂದು ರೀತಿಯ ವಿಸ್ಮೃತಿಯನ್ನು ಆವರಿಸಿಕೊಂಡಂತಿದ್ದ ರಾಘಣ್ಣನನ್ನು ಮಲ್ಲಾಡಿಹಳ್ಳಿ ಬಡಿದೆಬ್ಬಿಸಿತು. ಸ್ವಾಮೀಜಿಯವರ ಹತ್ತಿರ ಔಷಧಿ ತರಲು ಹೋಗಿಬರುತ್ತಿದ್ದ ನಮ್ಮ ಅವ್ವಕ್ಕ ಬಂದಾಗಲೆಲ್ಲ ವೆಂಕಟೇಶ ಮೂರ್ತಿ,ಚಿದಂಬರರಾಯರು ಮುಂತಾಗಿ ಉತ್ಸಾಹದಿಂದ ಮಾತನಾಡುತ್ತಿದ್ದಳು.ವಾರ ಬಿಟ್ಟು ವಾರ ಸುಧಾದಲ್ಲಿ ಕಥೆ ಬರೆಯುತ್ತಿದ್ದ ಚಿದಂಬರರಾಯರ ಹೆಸರು ನಮಗೆಲ್ಲ ಗೊತ್ತಿದ್ದಿತಾದರೂ ವೆಂಕಟೇಶ ಮೂರ್ತಿಯವರ ಹೆಸರನ್ನು ನಾವು ಅದುವರೆಗೂ ಕೇಳಿರಲಿಲ್ಲ. 'ತ.ರಾ.ಸು' ಸ್ವಾಮೀಜಿಯವರ ಬಳಿ ಔಷಧಿಗೆಂದು ಬರುತ್ತಾರೆ, ಕೆಲಸಾರಿ ಅಲ್ಲೇ ಉಳಿಯುತ್ತಾರೆ ಎಂದು ಕೂಡ ನಮ್ಮ ಅವ್ವಕ್ಕ ಹೇಳುತ್ತಿದ್ದಳು. ಕ್ರಮೇಣ ಅನಂತಮೂರ್ತಿ, ಶಿವರುದ್ರಪ್ಪ, ನರಹಳ್ಳಿ,ನಾಗಭೂಷಣ,ಸವಿತಾ,ಸ. ಉಷಾ, ಬಿದರಹಳ್ಳಿ ಮುಂತಾದ 'ಆ ಕಡೆಯ' ಹೆಸರುಗಳು ಮತ್ತೆ ಮತ್ತೆ ಕೇಳತೊಡಗಿದವು. ದಿ.ಜಿ.ಎಲ್.ರಾಮಪ್ಪ ರಜೆ ಬಂದಾಗಲೆಲ್ಲ ರಾಘಣ್ಣನ ಜೊತೆ ಬೆಟಗೇರಿಗೆ ಬರುತ್ತಿದ್ದರು. ಆಗೆಲ್ಲ ಸಾಹಿತ್ಯ,ಹೊಸ ಪುಸ್ತಕಗಳು,ನವ್ಯ-ನವ್ಯೋದಯ,ಹೊಸ ಹೆಸರುಗಳು ಚರ್ಚೆಗೆ ಬರುತ್ತಿದ್ದವು.ಒಂದು ರೀತಿಯಲ್ಲಿ --ಅಂದು ಮಲ್ಲಾಡಿಹಳ್ಳಿ(ನಮ್ಮ ಮಟ್ಟಿಗೆ) ದಕ್ಷಿಣ ಕರ್ನಾಟಕದ ಲೇಖಕರ ಪರಿಚಯ ಮಾಡಿಕೊಡುವಲ್ಲಿ ಬಹು ಮುಖ್ಯ ಪಾತ್ರ ವಹಿಸಿತ್ತು - ಅದೂ ರಾಘಣ್ಣನ ಮೂಲಕ.ಸಹಜವಾಗಿಯೇ ನಮ್ಮಲ್ಲಿ ಮಲ್ಲಾಡಿಹಳ್ಳಿಯ ಬಗೆಗಿನ ರಮ್ಯ ಕುತೂಹಲ ಹೆಚ್ಚಾಗುತ್ತಲೇ ಸಾಗುತ್ತಿತ್ತು. ಮಹಾತ್ವಾಕಾಂಕ್ಷಿಯವರಲ್ಲದ ನಾವು 'ಇಷ್ಟು ಸಂತೋಷ ಸಾಕು' ಎಂಬಂತಿದ್ದೆವು. ನಾನೇ ಅದಾಗದಿದ್ದರೂ ಅದ'ರಲ್ಲಿ ನಾವಿರುವುದೇನು ಕಡಿಮೆ ಸಂತೋಷದ ಸಾಧ'ನೆಯೇ. ಆದರೆ ಮಲ್ಲಾಡಿಹಳ್ಳಿಯಲ್ಲಿ ನಾವು ಅಂದುಕೊಂಡದ್ದಕ್ಕಿಂತ ಹೆಚ್ಚಿನ ವಿಶೇಷಗಳು ಜರುಗುತ್ತಿದ್ದವು...

ಸಮಾನಾಸಕ್ತರು ಸೇರಿ ಚರ್ಚಿಸುವುದು, ಬರೆಯುವುದು, ವಿಮರ್ಶಿಸುವುದು, ಕಾರ್ಯಕ್ರಮ ಏರ್ಪಡಿಸುವುದು, ಸಂಗೀತ ಕಾರ್ಯಕ್ರಮ– ಸ್ವಾಮೀಜಿಯವರ ಯೋಗ ಶಿಬಿರಗಳು, ಉಪನ್ಯಾಸಗಳು ಇತ್ಯಾದಿ ಇವೆಲ್ಲ ನಮಗೆ ಕ್ರಮೇಣ ತಿಳಿದು ಬಂದವು. ರಾಘಣ್ಣನೂ ಆ ಹೊತ್ತಿನಲ್ಲಿ ಪದ್ಯ ಬರೆಯಲು ಯತ್ನಿಸುತ್ತಿದ್ದನಂತೆ. ವೆಂಕಟೇಶ ಮೂರ್ತಿಯವರು ನಿಮ್ಮ ಮಾಧ್ಯಮ ಪದ್ಯವಲ್ಲ, ಗದ್ಯವೆಂದು ತೋರಿಸಿಕೊಟ್ಟರಂತೆ...ಇತ್ಯಾದಿ. ನಾನು ಅದುವರೆಗೂ ಮಲ್ಲಾಡಿಹಳ್ಳಿಗೆ ಹೋದವನಲ್ಲ.ಮಲ್ಲಾಡಿಹಳ್ಳಿಯೂ ನಮ್ಮ ಬೆಟಗೇರಿಯಂಥದೇ ಬಯಲು ಸೀಮೆಯ ಹಳ್ಳಿಯೆಂದು ಕೇಳಿದಾಗಲೂ ಏಕೋ ಏನೋ ಊರಿನ ಹೆಸರಿನೊಂದಿಗೆ ಹಚ್ಚ ಹಸುರಿನ ಮಲೆನಾಡಿನ ಕಲ್ಪನೆ ಬಂದು ಬಿಡುತಿತ್ತು!

****

೧೯೭೭ರ ದೀಪಾವಳಿ ರಾಘಣ್ಣನ ಮೂಲಕ ನಮ್ಮೆಲ್ಲರ ಪಾಲಿಗೆ ಒಂದು ಮರೆಯಾಲಾಗದ ಸಂತೋಷದ ಹಬ್ಬವಾಗಿ ಪರಿಣಮಿಸಿತು. ನನಗಿನ್ನೂ ಆ ದಿನ ನೆನಪಿದೆ. ರಾತ್ರಿ ಎಂಟೂ ಕಾಲು– ಎಂಟೂವರೆ ಸುಮಾರಿಗೆ ಊಟ ಮಾಡುತ್ತಿದ್ದೆವು. ತಟ್ಟೆಯಲ್ಲಿ ಒಂದೆರಡು ಕರಿಗಡುಬುಗಳಿದ್ದವು. ನಮ್ಮ ದೊಡ್ಡಣ್ಣ ಗೊಕಾಕಕ್ಕೆ ಹೋಗಿದ್ದವನು ಕೈಯಲ್ಲಿ ಉದಯವಾಣಿ ದೀಪಾವಳಿ ವಿಶೇಷಾಂಕ ಹಿಡಿದುಕೊಂಡು ದುಡು ದುಡನೆ ತಲೆ ಬಾಗಿಲು ದಾಟಿ ಒಳಗೇ ಬಂದವನೇ– 'ರಾಘು ರಿಕಾರ್ಡ್ ಮಾಡಿ ಬಿಟ್ಟಾನ. ಮೊದಲನೇ ಕಥಿಗ್ಯನ ಉದಯವಾಣಿಯೊಳಗ ಒಂದನೇ ಬಹುಮಾನ ಬಂದದ' ಎಂದು ಹೇಳಿದವನೇ ಅಳತೊಡಗಿದ. ನಾವೆಲ್ಲ ಸಂಭ್ರಾಂತರಾದೆವು. ತಂದೆಯವರು 'ಇಂಥದೊಂದು ಆಗಿಯೇ ಆಗುತ್ತದೆಂದು ನನಗೆ ಗೊತ್ತಿತ್ತು' ಎಂದು ಭಾವಾವಿಷ್ಟರಾದರು. ನಮ್ಮ ದೊಡ್ಡಣ್ಣನ ಕೈ ಬೆರಳು ಕಥೆ ಇರುವ ಪುಟದಲ್ಲೆ ಇದ್ದಿತು. ಹುಡುಕುವ ಪ್ರಶ್ನೆ ಇರಲಿಲ್ಲ.ನಂಬದಿರಲಾಗಲಿಲ್ಲ. 'ಒಡಪುಗಳು' ಎಂಬ ತಲೆಬರಹದಡಿ ದೊಡ್ಡ ಚಿತ್ರ. ಪಕ್ಕದಲ್ಲಿ 'ರಾಘವೇಂದ್ರ ಪಾಟೀಲ' ಎಂಬ ಹೆಸರು. 'ದೀಪಾವಳಿ ಕಥಾಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಕಥೆ' ಎಂಬ ಮತ್ತೊಂದು ಸಾಲು...ಮುಂದಿನದು ಕಾಣದಂತೆ ಕಣ್ಣಿನಲ್ಲಿ ನೀರು! ನಮ್ಮಮ್ಮ ದೀಪಾವಳಿಯ ವಿಶೇಷ ದೀಪಗಳ ಜೊತೆಗೆ ದೇವರ ಮುಂದೆ ಮತ್ತೊಂದು ತುಪ್ಪದ ದೀಪ ಬೆಳಗಿಸಿ, ಎಂದಿನಂತೆ ಮಾತನಾಡದೇ ಒಳಗೇ ಸಂತಸಪಟ್ಟಳು. ಊಟ ಸೇರದಷ್ಟು ಹೊಟ್ಟೆ ತುಂಬಿಹೋಗಿತ್ತು. ಆ ಮೇಲೆ ಎಲ್ಲರ ಮುಂದೆ ಕಂದೀಲಿನ

ಬೆಳಕಿನಲ್ಲಿ ಕಥೆ ಓದಿದೆ. ತೀರ್ಪುಗಾರರಾಗಿದ್ದ ಡಾ. ಚಂದ್ರಶೇಖರ ಕಂಬಾರ ಹಾಗೂ ಡಾ.ಜಿ.ಎಸ್ ಶಿವರುದ್ರಪ್ಪನವರ ಕಥೆಯ ಕುರಿತಾದ ಅಭಿಪ್ರಾಯ ಓದುವಾಗ ಗಂಟಲು ಕಟ್ಟಿದಂತಾಗಿತ್ತು. ಅಂದಿನ ದಿನಗಳಲ್ಲಿ ದೂರವಾಣಿಯ ಅನುಕೂಲವಿರಲಿಲ್ಲ. ಹೀಗಾಗಿ ಬಹುಮಾನ ಬಂದದ್ದನ್ನು ರಾಘಣ್ಣನಿಂದ ತಿಳಿಸಲಾಗಿರಲಿಲ್ಲ. ನಾವೂ ತಕ್ಷಣಕ್ಕೆ ನಮ್ಮ ಸಂತೋಷ ವ್ಯಕ್ತಪಡಿಸುವಂತಿರಲಿಲ್ಲ. ಮರುದಿನವೇ ಪತ್ರ ಬರೆದೆ. 'ಹಸ್ತಾಕ್ಷರದ ಬರಹ ಮುದ್ರಣವಾಗಿ ಕಂಡಾಗ ಎಷ್ಟೊಂದು ಬದಲಾವಣೆಗಳಾಗುತ್ತವೆ' ಎಂಬುದಕ್ಕೆ ಸಂಬಂಧಿಸಿ ನಾಲ್ಕಾರು  ಸಾಲು ಬರೆದಂತೆ ನೆನಪು.

ಆ ದಿನಗಳಲ್ಲಿ ಮನೆಗೆ ಬಂದವರ ಮುಂದೆಲ್ಲ ನಾವು ರಾಘಣ್ಣನ ಕಥೆಗೆ ಮೊದಲ ಬಹುಮಾನ ಬಂದಿದ್ದನ್ನು ಹೇಳುತ್ತಿದ್ದೆವು. ಓದಬಲ್ಲವರು ಒಂದೆರಡು ನಿಮಿಷ ನೋಡಿ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು. ಊರಲ್ಲಿಯ ಕೆಲ ಆಸಕ್ತರು ನಮ್ಮ ಮನೆಯಲ್ಲೇ ಕುಳಿತು ಓದಿ ಹೋಗುತ್ತಿದ್ದರು. 'ನಿಮ್ಮದೇನ್ರೀ, ಬಡ್ಡಿಂದ ಅದ ಮನಿತನ' ಎಂದು ಸಂತೋಷಕರ ಹಾಗೂ ಸಹಜವಾದುದು ಎಂಬ ಎರಡಭಿಪ್ರಾಯಗಳನ್ನು ಹೇಳಿಹೋಗುತ್ತಿದ್ದರು.

ಒಟ್ಟಾರೆ 'ಒಡಪುಗಳು' ಒಂದು ದೊಡ್ಡ ತಿರುವು. ಹಾಗೇ ಮುಂದಿನ ಬರವಣಿಗೆಗೆ ಅಪಾರ ಉತ್ಸಾಹ ಒದಗಿಸಿದ ಒಂದು 'ದಂತ'ಕಥೆ. ಮರುವರ್ಷ ಪ್ರಜಾವಾಣಿ ವಿಶೇಷಾಂಕ ಬರಲಿಲ್ಲ.(ಸಂಪಾದಕ ಟೀಎಸ್ಸಾರ್ ತೀರಿಕೊಂಡ ಕಾರಣವಾಗಿ). ಆದರೆ ೧೯೭೯ರ ಹೊಸವರ್ಷದ ವಿಶೇಷಾಂಕ ಪ್ರಕಟಿಸಿತು. ರಾಘಣ್ಣನ 'ಪ್ರತಿಮೆಗಳು' ಕಥೆಗೆ ಎರಡನೆಯ ಬಹುಮಾನ ಬಂದಿತು.ಮೊದಲ ಬಹುಮಾನವನ್ನು ಯಾರಿಗೂ ಕೊಟ್ಟಿರಲಿಲ್ಲ! ಪ್ರಜಾವಾಣಿ ಅಂದು ತುಂಬ ಗುಣಮಟ್ಟದ ಸ್ಪರ್ಧೆ ಏರ್ಪಡಿಸುತ್ತಿದ್ದಿತಾದರೂ 'ಒಂದು ಅಮೂರ್ತ' ಮೊದಲ ಬಹುಮಾನದ ಜಾಗ ಖಾಲಿ ಬಿಟ್ಟಿದ್ದು ಒಳ್ಳೆಯ ಲೇಖಕರಿಗೂ ಸೋಜಿಗವೆನಿಸುವಂತಾಗಿತ್ತು. 'ಪ್ರತಿಮೆಗಳು' ಕಥೆ ಬರುವ ಮೊದಲೇ 'ಒಡಪುಗಳು' (೧೯೭೮) ಕಥಾ ಸಂಕಲನ ಹೊರಬಂದಿತ್ತು. ಹೆಚ್ಚಿನ ಕಥೆಗಳು ಪತ್ರಿಕೆಯಲ್ಲಿ ಬಂದವುಗಳಾಗಿರಲಿಲ್ಲ. ಏಕಕಾಲಕ್ಕೆ ಪ್ರಯೋಗಾತ್ಮಕವೂ, ಹೊಸ ಲೇಖಕನೊಬ್ಬನಿಗೆ ಇರುವ ಯಾವ ರೀತಿಯ ಕಥೆ ಬರೆಯಬೇಕೆಂಬ ಗೊಂದಲವೂ, ನವ್ಯರ ಕಾಲದ ಪ್ರಭಾವದಿಂದ ಹಾಗೂ ಆಗ ಬರುತ್ತಿದ್ದ ಕಥೆಗಳ ಮರುಸೃಷ್ಟಿಯಂತಹ ಬರವಣಿಗೆಗಳು ಅದರಲ್ಲಿದ್ದವು. ಆದರೂ ಎಲ್ಲ ಕಥೆಗಳಲ್ಲೂ ಭಿನ್ನ – ಹೊಸತನದ ಕಾಂಕ್ಷೆಯ ಛಾಯೆ ಸ್ಪಷ್ಟವಾಗಿದ್ದಿತು.

ಭಾಷೆಯ ವಿಷಯದಲ್ಲೂ ಹುಡುಕಾಟ– ಪ್ರಯೋಗ ಒಟ್ಟಿಗೆ ನಡೆಯುವಂತಿತ್ತು. ಮುಂದೆ ೧೯೮೨ರಲ್ಲಿ 'ಪ್ರತಿಮೆಗಳು' ಕಥಾಸಂಕಲನ ಪ್ರಕಟಗೊಂಡಿತು.ಶಿವರುದ್ರಪ್ಪ ನವರೆ ಈ ಸಂಕಲನವನ್ನು ಚಿತ್ರದುರ್ಗದಲ್ಲಿ ಬಿಡುಗಡೆಗೊಳಿಸಿ ಪ್ರೀತಿಯ ಭರವಸೆಯ ಮಾತುಗಳನ್ನಾಡಿದರು.

ಮುಂದೆ ರಾಘಣ್ಣ ಸುಧಾ ಯುಗಾದಿಯ ಕಾದಂಬರಿ ಸ್ಪರ್ಧೆಯಲ್ಲಿ ಭಾಗವಹಿಸಿ 'ಕಳಕೊಂಡವರು'(ಬಾಳವ್ವನ ಕನಸುಗಳು) ಕಾದಂಬರಿಗೆ ಮೆಚ್ಚುಗೆಯ ಬಹುಮಾನ ಗಳಿಸಿದನು.ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯೂ ಮೆಚ್ಚುಗೆಯ ಬಹುಮಾನ ಗಳಿಸಿದಂತೆ ನೆನಪು.ಶಾಂತಿನಾಥದೇಸಾಯಿ ಮತ್ತು ಶಂಕರಮೊಕಾಶಿ ಪುಣೇಕರ ಅವರಿಗೆ ಜಂಟಿಯಾಗಿ ಮೊದಲ ಬಹುಮಾನ ದೊರೆತಿದ್ದಿತು.

ಆ ನಂತರ ರಾಘಣ್ಣ ಯಾವ ಸ್ಪರ್ಧೆಯಲ್ಲಿಯೂ ಭಾಗವಹಿಸಲಿಲ್ಲ.ಎಲ್ಲ ಪತ್ರಿಕೆಗಳಿಂದ– ವಿಶೇಷವಾಗಿ ಪ್ರಜಾವಾಣಿಯಿಂದ ಆಹ್ವಾನವಿರುತ್ತಿತ್ತು. ಆದರೆ ಸಂಖ್ಯಾ ಹುಚ್ಚಿಗೂ, ಎಲ್ಲರನ್ನು ತೃಪ್ತಿಪಡಿಸುವ ಬರವಣಿಗೆಗೂ ಆತ ಬೀಳಲಿಲ್ಲ. ಪ್ರತಿ ಕಥೆಯ ಹಿಂದೆಯೂ ಧ್ಯಾನವಿರುತ್ತಿತ್ತು.ಚನ್ನಾಗಿಯೇ ಬರೆಯಬೇಕೆಂಬ ಹಠ ಹಾಗೂ ತಾಳ್ಮೆ ಜೊತೆಯಾಗಿ ಕೆಲಸ ಮಾಡುತ್ತಿದ್ದವು. ಅಂತೆಯೇ ಕಥೆಗಾರ, ಕಾದಂಬರಿಕಾರ,ವಿಮರ್ಶಕ,ಸಂಪಾದಕ, ಏನೇ ಆಗಿ ಕೆಲಸ ಮಾಡಿದರೂ ಆತನಿಗೆ ಯಶಸ್ಸು ಒಲಿಯುತ್ತ ಬಂದಿತು. ರಾಘಣ್ಣನ ಬರವಣಿಗೆಯ ಕುರಿತು ನಾನು ಹೆಚ್ಚಿಗೆ ಏನನ್ನೂ ಹೇಳುವುದಿಲ್ಲ.ಆದರೆ ಮಹತ್ವಾಕಾಂಕ್ಷಿಯಾಗದೇ ಇದ್ದಾಗಲೂ, ಹೆಚ್ಚಿನ ಹರವನ್ನು ಅಪೇಕ್ಷಿಸದಿದ್ದಾಗಲೂ 'ಒಡಪುಗಳು' ನನ್ನ ಪ್ರೀತಿಯ ಕಥೆಯಾಗಿಯೇ ಉಳಿದಿದೆ. ಮೊದಲ ಪ್ರೀತಿಯಂಥ ಹಲವು ಸೂಕ್ಷ್ಮತೆಗಳು ಅದರಲ್ಲಿ ಅಡಗಿ ಕುಳಿತಿವೆ ಎಂದು ನನಗೆನ್ನಿಸಿದೆ. ಇದರೊಂದಿಗೆ ಅವನ ಬರವಣಿಗೆ ಕುರಿತು ಇನ್ನೆರಡು ಮಾತು ಹೇಳಬಯಸುತ್ತೇನೆ. ಅವನ ಕಥೆಗಳಲ್ಲಿ ಬರುವ ಪಾತ್ರಗಳಲ್ಲಿ ಹಳ್ಳಿಯ ಪರಿಸರದ ಹಿನ್ನಲೆಯಿದ್ದಾಗಲೂ – ಪರಿಸರವೇ ಕಥೆಯಾದಾಗಲೂ ಬಹಳಷ್ಟು ಪಾತ್ರಗಳಲ್ಲಿ ನಮ್ಮ ತಂದೆಯ ಇರುವುಕೆಯ ಛಾಯೆ ದಟ್ಟವಾಗಿ – ಮಂದವಾಗಿ ಇದ್ದಂತಿದೆ. ಅದು ಗೌಡನದಾಗಿರಬಹುದು, ಮಕ್ಕಳಿಗೆ ಸಂಗೀತ ಕಲಿಸ ಬಯಸುವ ಅಪ್ಪನದಾಗಿರಬಹುದು. ಇಲ್ಲವೇ ತಿರುಗಾಟಕ್ಕೆ ಹೊರಟ ದ್ಯಾವಪ್ಪನದಾಗಿರಬಹುದು. ಇದೇ ಕಾಲಕ್ಕೆ ನನಗೆ ಅವನ ಕಥೆಗಳಲ್ಲಿ ನಮ್ಮ ತಾಯಿಯ ಪಾತ್ರಗಳು ಕಾಣುತ್ತಿಲ್ಲ. ಅಥವಾ ಕಡಿಮೆ. ಮತ್ತೊಬ್ಬರ ಮನಸ್ಸಿನಲ್ಲಿರುವುದನ್ನು ಥಟ್ಟನೆ ಗುರುತಿಸುತ್ತಿದ್ದ, ಅವರ ಅಪೇಕ್ಷೆಯನ್ನು ಮಾತಾಡದೇ ಪೂರೈಸುತ್ತಿದ್ದ ನಮ್ಮ ತಾಯಿಯಷ್ಟು ಸೂಕ್ಷ್ಮ

ವ್ಯಕ್ತಿಗಳನ್ನು ನಾನು ಕಂಡಿಲ್ಲ. ಆಕೆ ಬರೆಯುವವಳಾಗಿರಲಿಲ್ಲ. ಆದರೆ ಬರೆಯುವವರು ಆಕೆಯ ಸೂಕ್ಷ್ಮತೆ ಪಡೆದರೆ ಎಷ್ಟು ಚನ್ನಾಗಿರುತ್ತದೆಂದು ನನಗನ್ನಿಸುತ್ತಿರುತ್ತದೆ. ಮನೆಗೆ ನಿರಂತರ ಹಾಲು–ಮಜ್ಜಿಗೆ ಕೇಳಲು ಬರುವವರನ್ನು ಕಂಡು, ನಾವು, ಅರ್ಧ ಬುದ್ದಿಯ ಮಕ್ಕಳು ವಿನಾಕಾರಣ ಗದರುತ್ತಿದ್ದರೆ, ಅವಳು ನಮಗೇನೂ ಅನ್ನುತ್ತಿರಲಿಲ್ಲ. ಆದರೆ ಇನ್ನೊಂದು ಬಾಗಿಲಿನಿಂದ ಬಂದು ತೆಗೆದುಕೊಂಡು ಹೋಗುವಂತೆ ಅವರಿಗೆ ಸನ್ನೆ ಮಾಡುತ್ತಿದ್ದಳು. ಇಂಥ ಒಂದು ಸ್ತ್ರೀ ಪಾತ್ರ ರಾಘಣ್ಣನಿಂದ ಮರುಸೃಷ್ಟಿಯಾಗಬೇಕೆಂದು ನನಗೆ ಅನ್ನಿಸಿದ್ದಿದೆ. (ಅವನು ಅವಳ ಕುರಿತಾಗಿ ಕನ್ನಡಪ್ರಭದ 'ಸಖಿ'ಗೆ ಬರೆದ ಲೇಖನ ನನ್ನ ಮನಸ್ಸಿನಲ್ಲಿದೆ).

****

ನನ್ನ ರಾಘಣ್ಣನ ಸಾಹಿತ್ಯದ ಸಂಬಂಧದ ಬಗ್ಗೆ ಎರಡು ಮಾತು ಹೇಳಬೇಕು. ನಮ್ಮ ಮನೆಯಲ್ಲಿ ಹೆಚ್ಚು ಜನ ಒಂದಿಲ್ಲೊಂದು ಸಂದರ್ಭದಲ್ಲಿ ಕಥೆ–ಕವಿತೆ ಬರೆದವರೇ. ಆದರೂ ರಾಘಣ್ಣನಿಗೆ ನನ್ನ ಬಗೆಗೆ ಒಂದಿಷ್ಟು ಭರವಸೆ, ನಂಬಿಕೆ. ತನ್ನ ಬರವಣಿಗೆಯ ಕುರಿತಾಗಿ ನನ್ನೊಂದಿಗೆ ಚರ್ಚಿಸಿದ್ದಿದೆ. ತನ್ನ ಸುದೀರ್ಘ 'ಬಸತ್ತಿ' ಕಥೆಯ ಕೊನೆಯ ಕುರಿತಾಗಿ ನನ್ನಲ್ಲಿ ಸಾಕಷ್ಟು ಮಾತನಾಡಿ ಅದರ ಅಂತಿಮ ಭಾಗ ಬರೆದದ್ದಿದೆ. ಅವನು ಸಂಪಾದಿಸಿದ 'ಆನಂದಕಂದ' 'ನನ್ನ ನೆನಪುಗಳು' ಆತ್ಮ ಕಥೆಗೆ ಏನೂ ಅಲ್ಲದ ನನ್ನಿಂದ ಒಂದು ಪ್ರಸ್ತಾವನೆ ಬರೆಸಿದ್ದಿದೆ. 'ಸಂವಾದ' ಪತ್ರಿಕೆಗಾಗಿ ಪುಸ್ತಕಗಳ ವಿಮರ್ಶೆ ಮಾಡಿಸಿದ್ದಿದೆ. ಎರಡು ವರ್ಷ ಬೆಳಗಾವಿಯಲ್ಲಿ 'ಆನಂದಕಂದ ಗ್ರಂಥಮಾಲೆ'ಯ ಪುಸ್ತಕ ಬಿಡುಗಡೆಯ ಜವಾಬ್ದಾರಿಯನ್ನು ನನಗೆ ವಹಿಸಿದ್ದು ಇದೆ. ಇಷ್ಟು ಮಾತ್ರವಲ್ಲದೆ 'ನೀನೂ ಬರೆಯ ಬಲ್ಲೆ' ಎಂದು ನನ್ನ ತಂದೆಯು ಹೇಳುತ್ತಿದ್ದುದನ್ನು ನೆನಪಿಸುವಂತೆ ಬರೆಯಲು ಒತ್ತಾಯಿಸಿದ್ದು–ಬರೆಯಿಸಿದ್ದೂ ಇದೆ. ಹೀಗೆ ಬಂದ ನನ್ನ ಲಲಿತ ಪ್ರಬಂಧಗಳ ಸಂಕಲನ(ಆತ್ಮಸಾಕ್ಷಿಯ ಹಾವಳಿಗಳು)ವನ್ನು ನನಗಾವ ಕಷ್ಟವೂ ಸೋಕದಂತೆ ಪ್ರಕಟಿಸಿ, ನಾನೂ ಕೈಯಲ್ಲಿ ನನ್ನದೊಂದು ಪುಸ್ತಕ ಹಿಡಿದುಕೊಂಡು ಲೇಖಕನ ಗತ್ತಿನಲ್ಲಿ ಓಡಾಡುವಂತೆಯೂ ಆಗಿದೆ. ತನ್ನ ಮೊದಲೆರಡು ಕಥಾ ಸಂಕಲನ ಪ್ರಕಟಿಸುವಾಗ ರಾಘಣ್ಣ ಆರ್ಥಿಕ ತೊಂದರೆಯಲ್ಲಿದ್ದ. ಆದರೆ ನನಗೆ ಮಾತ್ರ ಅಂಥ ತೊಂದರೆಯಾಗದಂತೆ ನೋಡಿಕೊಂಡ. ಈಗಲೂ ಇನ್ನೊಂದು ಸಂಕಲನಕ್ಕಾಗುವಷ್ಟು ಪ್ರಭಂದಗಳಾಗಿವೆಯೇ ಎಂದು ಕೇಳುತ್ತಲೇ ಇರುತ್ತಾನೆ.

ರಾಘಣ್ಣನಿಗೆ ಪ್ರಶಸ್ತಿಗಳು ಬಂದಾಗಲೆಲ್ಲ ನಾವು ಸಂಭ್ರಮ ಪಡುತ್ತಿದ್ದೆವು. ಮೈಸೂರು, ಬೆಂಗಳೂರು,ಗುಲ್ಬರ್ಗ,ಶಿವಮೊಗ್ಗ, ಹುನಗುಂದ,ಕಾಂತಾವರ ಮುಂತಾದೆಲ್ಲೆಡೆ ನಾನು ಪ್ರಶಸ್ತಿ ಪ್ರದಾನ ಸಮಾರಂಭಗಳಲ್ಲಿ ಅವನೊಡನೆ ಭಾ'ಗವಹಿಸುತ್ತಿದ್ದೇನೆ. ಕೇಂದ್ರ ಸಾಹಿತ್ಯ ಅಕಾಡೆಮಿ ತೇರು ಕಾದಂಬರಿಗೆ ಪ್ರಶಸ್ತಿ ಪ್ರಕಟಿಸಿದಾಗಲಂತೂ ನಾವು ಹರ್ಷಾತಿರೇಕವನ್ನೆ ಅನುಭವಿಸಿದೆವು.ನಮ್ಮ ಚಿಕ್ಕಪ್ಪ ಬೆಟಗೇರಿ ಕೃಷ್ಣಶರ್ಮರಿಗೆ ಕಡೆಯ ಗಳಿಗೆಯ ರಾಜಕಾರಣದಿಂದ ತಪ್ಪಿ ಹೋಗಿದ್ದ ಈ ಪ್ರಶಸ್ತಿ ಸುಮರು ೪೫ – ೪೬ ವರ್ಷಗಳ ನಂತರ ನಮ್ಮ ಮನೆಗೆ ಅಂತೂ ಬಂದೇ ಬಿಟ್ಟಾಗ ಕೇಳಬೇಕೆ? ನಾವೆಲ್ಲ ದಿಲ್ಲಿಗೆ ಹೋಗುವುದೆಂದು ಆಗಲೇ ನಿರ್ಧರಿಸಿಬಿಟ್ಟಿದ್ದೆವು. ಅದರಂತೆ ರಾಘಣ್ಣ ಮತ್ತು ಅತ್ತಿಗೆ ಬೆಂಗಳೂರಿನಿಂದ ನೇರವಾಗಿ ದಿಲ್ಲಿಗೆ ಹೊರಟರು. ನಾವು – ಅಂದರೆ – ನಮ್ಮ ದೊಡ್ಡಣ್ಣ ಶಶಿಕಾಂತ ಮತ್ತು ದೊಡ್ಡತ್ತಿಗೆ, ನಾವಿಬ್ಬರು, ಹಾಗೂ ನನ್ನ ತಮ್ಮ ಹನುಮಂತ ಹಾಗೂ ಅವನ ಹೆಂಡತಿ – ಹೀಗೆ ಆರುಜನ ಬೆಟಗೇರಿಯಿಂದ ಹೊರಟೆವು. ನಾವು ಮೊದಲು ದೆಹಲಿ ಮುಟ್ಟಿ ರಾಮಕೃಷ್ಣಪುರಂನಲ್ಲಿನ ಕರ್ನಾಟಕ ಸಂಘದಲ್ಲಿ ಉಳಿದುಕೊಂಡೆವು. ರಾಘಣ್ಣ ಹಾಗೂ ಅತ್ತಿಗೆ ೪–೫ ತಾಸುಗಳ ನಂತರ ಬಂದವರು ತಮಗೆ ವ್ಯವಸ್ಥೆ ಮಾಡಿದ ಕಡೆ ಉಳಿಯಲು ಹೋದರು. ಎಲ್ಲ ಚನ್ನಾಗಿ ಸಾಗುತ್ತಿತ್ತು. ಮರುದಿನ ಪ್ರಶಸ್ತಿ ಪಡೆಯುವುದು ನಂತರ ೩–೪ ದಿನಗಳಲ್ಲಿ ದಿಲ್ಲಿ ಅದರ ಸುತ್ತಮುತ್ತಲ ಪ್ರದೇಶ ಸುತ್ತುವುದು ಖರೀದಿ ಮಾಡುವುದು ಮುಂತಾಗಿ ಅಂದುಕೊಂಡು ಸಣ್ಣಮಕ್ಕಳ ಹಾಗೆ ಉತ್ಸಾಹದಲ್ಲಿದ್ದೆವು.

ಮರುದಿನ ಪೆಬ್ರವರಿ ೨೧ ೨೦೦೯. ಸಂಜೆ ಬೇರೆ ಬೇರೆ ಭಾರತೀಯ ಭಾಷೆಯ ಲೇಖಕರ ಜೊತೆಗೆ ರಾಘಣ್ಣನಿಗೂ ಡಾ. ಕರಣಸಿಂಗ್ ಪ್ರಶಸ್ತಿ ಪ್ರದಾನ ಮಾಡಿದರು. ಕೃತಿ ಮತ್ತು ಲೇಖಕರ ಕುರಿತು ಹಿಂದೀ ಇಂಗ್ಲೀಷ್‌ಗಳಲ್ಲಿ ಹೇಳುವುದನ್ನು ಕೇಳಿದಾಗ ನಮ್ಮನ್ನು ನಾವೇ ಸಂಭಾಳಿಸಿಕೊಳ್ಳಬೇಕಾದಷ್ಟು ಭಾವಾವೇಶ ಉಂಟಾಯಿತು. ಯಾವುದೋ ಬೆಟಗೇರಿ ಎಂಬ ಹಳ್ಳಿಯಿಂದ ಬಂದ ನಮ್ಮನ್ನು ದಿಲ್ಲಿಯವರು ಗುರುತಿಸುವಂತಾಯಿತಲ್ಲ ಎಂಬ ವಿಚಾರ ರಾತ್ರಿಯೆಲ್ಲ ನನ್ನನ್ನು ಎಚ್ಚರಗೊಳಿಸುತ್ತಿತ್ತು. ಮರುದಿನವೇ ನಾವು ದಿಲ್ಲಿಯಿಂದ ಹೊರಗೆ ಸುತ್ತಾಡಲು ಹೊರಡುವವರಿದ್ದೆವು. ಆದರೆಅಂದು ಪ್ರಶಸ್ತಿ ವಿಜೇತ ಬರಹಗಾರರ ಸಭೆಯೊಂದು ಏರ್ಪಾಡಾಗಿತ್ತು.ಅದಾಗಿ ಸಂಜೆಗೆ ಡಾ.ಗಿರೀಶ್ ಕಾರ್ನಾಡರ ವಿಶೇಷ ಉಪನ್ಯಾಸವನ್ನೂ ಕೇಳಿದೆವು. ಹೀಗಾಗಿ

ಅಂದು ನಾವು ಪೂರ್ತಿದಿನ ಅದರಲ್ಲೇ ಕಳೆದು ಒಂದಿಷ್ಟು ಹೊತ್ತು ಖರೀದಿಯ ಸುಖ ಅನುಭವಿಸಿದೆವು.

ಮರುದಿನ ಫೆಬ್ರವರಿ ೨೩ ೧೯೦೬. ನಾವು ಎಂಟೂ ಜನ ಆಗ್ರಾ, ಫತೇಪುರ,ಸಿಕ್ರಿ ಮುಂತಾದ ಸ್ಥಳಗಳನ್ನು ನೋಡಲು ಪ್ರವಾಸೀ ಬಸ್ ಹತ್ತಿದೆವು. ರಾಘಣ್ಣನಿಗೆ ಅಷ್ಟು ಉತ್ಸಾಹವಿದ್ದಂತಿರಲಿಲ್ಲ. ಎದೆಯಲ್ಲಿ ಒಂದು ರೀತಿಯ ಭಾರ ತುಂಬಿಕೊಂಡಂತೆ ಭಾಸವಾಗುತ್ತಿತ್ತು. ಅಷ್ಟಾದರೂ ಒಬ್ಬರಿಗೊಬ್ಬರು ಚೇಷ್ಟೆ ಮಾಡುತ್ತ ಸಾಗಿದ್ದೆವು. ನೋವು ಕಡಿಮೆಯಾಗಿರಲಿಲ್ಲ. ಬಸ್ಸಿನ ಜನರಿಗೆ ದಾರಿಯಲ್ಲಿ ಯಾವುದಾದರೂ ಆಸ್ಪತ್ರೆಯಿದ್ದರೆ ನಿಲ್ಲಿಸುವಂತೆ ಸೂಚನೆ ಕೊಟ್ಟರೂ ಅವರೇನೂ ಗಂಭೀರವಾಗಿ ಪರಿಗಣಿಸಲಿಲ್ಲ. ಕೇವಲ ಹೂಂ ಎನ್ನುತ್ತಿದ್ದರು. ತಿಂಡಿಗೆಂದು ಬಸ್ ನಿಲ್ಲಿಸುವ ಸ್ಥಳ ಬಂದಾಗ ಬಸ್ ಎರಡು ಮೂರು ತಾಸು ಸಾಗಿ ಬಂದಿತ್ತು. ಅಲ್ಲಿ ಆಸ್ಪತ್ರೆಯೂ ಇರಲಿಲ್ಲ. ಅಲ್ಲಿ ಒಂದೆರಡು ವಡೆ ತಿಂದ ನಂತರ 'ಒಂದಿಷ್ಟು ಪರವಾಯಿಲ್ಲ' ಅನ್ನುವಂತಾದರೂ ಏಕೋ ಪ್ರಯಾಣ ಮುಂದುವರೆಸುವ ಮನಸ್ಸಾಗದೇ ಉಳಿದವರನ್ನು ಮುಂದೆಹೋಗಲು ಬಿಟ್ಟು ನಾವಿಬ್ಬರು ಮರಳಿ ದಿಲ್ಲಿಯತ್ತ ಹೊರಟೆವು. ದಿಲ್ಲಿ ತಲುಪಿ ದೂರವಾಣಿಯಲ್ಲಿ ಡಾ. ಪುರಯಷೋತ್ತಮ ಬಿಳಿಮಲೆಯವರನ್ನು ಸಂಪರ್ಕಿಸಿದಾಗ 'ಯಾವುದಕ್ಕೂ ಏಮ್ಸ್‌ಗೆ ಹೋಗಿರಿ' ಎಂಬ ಸಲಹೆ ಕೊಟ್ಟರು. ಒಬ್ಬ ಒಳ್ಳೆಯ ಆಟೋದವನು ಸಿಕ್ಕು ಆತ ನಮ್ಮನ್ನು ನೇರವಾಗಿ ತುರ್ತು ವಿಭಾಗಕ್ಕೆ ಕರೆದೊಯ್ದು. ಅದು ಎರಡು ಗಂಟೆಯಾಗುವ ಸಮಯ– ಶಿಫ್ಟ್ ಬದಲಾಗುವ ಹೊತ್ತು. ಮೊದಲಿನವರು ೫–೧೦ ನಿಮಿಷ ಬೇಗ ಹೋಗಬೇಕೆನ್ನುವವರು.ಮುಂದಿನವರು ೫–೧೦ ನಿಮಿಷ ತಡವಾಗಿ ಬರುವವರು. ಅಂಥದರಲ್ಲಿ ಹೇಗೋ ಒಬ್ಬ ಡಾಕ್ಟರ್‌ರಿಗೆ ವಿನಂತಿಸಿ, ಒಂದು ಸ್ಟ್ರೆಚರ್ ತಂದು ಅದರಲ್ಲಿ ರಾಘಣ್ಣನನ್ನು ಮಲಗಿಸಿ ಕರೆದುಕೊಂಡು ಹೋಗಿ ಇಸಿಜಿ ಮಾಡುತ್ತಿರುವಾಗಲೇ ಅವನಿಗೆ ಹೃದಯಾಘಾತವಾಗಿಬಿಟ್ಟಿತು. ಯಾವುದೋ ಬೆಟಗೇರಿಯಂಥ ಹಳ್ಳಿಯ ನಾವು ಈ ದಿಲ್ಲಿಗೆ ಬಂದು ಈ ಸ್ಥಿತಿಯಲ್ಲಿ ಸಿಕ್ಕುಬಿದ್ದೆವಲ್ಲ ಎಂಬಂತೆನಿಸಿ ಕಾಲಲ್ಲಿಯ ಶಕ್ತಿಯೇ ಹೊರಟು ಹೋದಂತಾಯ್ತು. ಆದರೆ ಅದೊಂದು ಶ್ರೇಷ್ಠ ದರ್ಜೆಯ ಆಸ್ಪತ್ರೆ. ತಕ್ಷಣವೇ ಸ್ಪಂದಿಸಿದರು. ಚಿಕಿತ್ಸೆ ಆರಂಭಿಸಿದರು. ೦ಟಿರಯೂಟಚಿಣಥಿ ಮಾಡಬೇಕು. ಸುಮಾರು ಒಂದೂ ಕಾಲು ಲಕ್ಷ ಹಣ ಬೇಕಾಗುತ್ತದೆ ಎಂದು ಹೇಳಿದರು. ನಮ್ಮಲ್ಲಿ ಅದರ ಅರ್ಧದಷ್ಟು ಹಣ ಇದ್ದಿತಾದರೂ ತಕ್ಷಣವೇ ನನಗೆ ಏನು ಹೇಳಬೇಕು ಎನ್ನುವುದು ತಿಳಿಯದೇ ೨೪ ಗಂಟೆಯೊಳಗೆ ಹಣ

ಸಂದಾಯ ಮಾಡುತ್ತೇವೆಂದು ಹೇಳಿ ನಾವು ಬಂದ ಕಾರಣ ಸಂಧರ್ಭಗಳನ್ನು ಚುಟುಕಾಗಿ ಹೇಳಿದೆ. ಅವರು ಅದಕ್ಕಾವ ತಕರಾರು ಮಾಡದೇ ರಾಘಣ್ಣನ ಕೊರಳಲ್ಲಿದ್ದ ಬಂಗಾರದ ಸರ, ಉಂಗುರ, ವಾಚು, ಜೇಬಿನಲ್ಲಿದ್ದ ಹಣ ಎಲ್ಲವನ್ನೂ ನನಗೊಪ್ಪಿಸಿ ಆಪರೇಶನ್ ಥೀಯೆಟರ್‌ಗೆ ಕರೆದೊಯ್ದರು. ನಾನು ಬಿಳಿಮಲೆಯವರಿಗೆ ಫೋನ್ ಮಾಡಿ ಎಲ್ಲ ವಿಷಯ ತಿಳಿಸಿದೆ. ಎರಡು ಗಂಟೆಯೊಳಗೆ ಹಣದ ವ್ಯವಸ್ಥೆಯಾಗುತ್ತದೆ. ಅದುವರೆಗೂ ನಿಮ್ಮೊಂದಿಗೆ ಇರಲು ಡಾ. ಅಡಕೋಳಿ ಬರುತ್ತಾರೆ ಧೈರ್ಯವಾಗಿರಿ ಎಂದು ಬಿಳಿಮಲೆಯವರು ತಿಳಿಸಿದರು. ಏಮ್ಸ್‌ನಲ್ಲೇ ಕೆಲಸ ಮಾಡುತ್ತಿದ್ದ, ಅಂದು ವಾರದ ರಜೆಯಲ್ಲಿದ್ದ ಡಾ. ಅಡಕೋಳಿಯವರು ಐದೇ ನಿಮಿಷದಲ್ಲಿ ಬಂದು ನನ್ನ ಜೊತೆ ಉಳಿದರು. ಮುಂದಿನ ಮುಕ್ಕಾಲುಗಂಟೆಯೋಳಗೆ ರಾಘಣ್ಣನನ್ನು ಸ್ಟ್ರೆಚರ್‌ನಲ್ಲಿ ಕರೆದುಕೊಂಡು ಬಂದರು. ಆಪರೇಶನ್ ಮುಗಿದಿತ್ತು. ಆತ ಏನೂ ಆಗಿಲ್ಲವೆಂಬಂತೆ ಡಾಕ್ಟರರೊಡನೆ ಸಂಭಾಷಿಸುತ್ತಿದ್ದ. ಮಾತುಕೊಟ್ಟಂತೆ ಬಿಳಿಮಲೆಯವರು ಎಲ್ಲ ವ್ಯವಸ್ಥೆ ಮಾಡಿದರು.ಇಷ್ಟಾಗುವ ಹೊತ್ತಿಗೆ ಕರ್ನಾಟಕದ ಎಲ್ಲ ಪತ್ರಿಕೆಗಳಿಂದ ರಾಘಣ್ಣನ ಆರೋಗ್ಯದ ಕುರಿತಂತೆ ದೂರವಾಣಿ ಕರೆಗಳು ಬರತೊಡಗಿದವು. ದೆಹಲಿ ಕನ್ನಡ ಸಂಘಗಳಿಂದ, ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ, ಅಗ್ರಹಾರರಿಂದ ಆರೋಗ್ಯ ವಿಚಾರಿಸಿ ದೂರವಾಣಿಗಳು ಬರತೊಡಗಿದವು. ಕ್ಯಾಮರಾ ಸಹಿತ ಬಂದ ಇಬ್ಬರು ಪತ್ರಕರ್ತರನ್ನು ಡಾಕ್ಟರರೇ ತಡೆದರು. ಈ ಸಮಯದಲ್ಲಿ ಒದಗಿಬಂದ ಸಹಕಾರ, ಬೆಂಬಲ; ಏಮ್ಸ್ ಸಿಬ್ಬಂದಿಯ ಅದ್ಭುತ ಮಾನವೀಯತೆ ಹಾಗೂ ವೃತ್ತಿಪರತೆ ಎಂದೆಂದೂ ಮರೆಯಲಿಕ್ಕಾಗದಂತದು. ಅಣ್ಣ–ತಮ್ಮಂದಿರು – ಅತ್ತಿಗೆಯರು ಪ್ರವಾಸ ಮೊಟಕುಗೊಳಿಸಿ ಆಸ್ಪತ್ರೆಗೆ ಬಂದಾಗ ರಾತ್ರಿ ೧೧ ಗಂಟೆಯಾಗಿತ್ತು. ಸಂಕಟವೇನೋ ದೂರವಾಗಿತ್ತು.ಆದರೆ ಆಘಾತದ ಕಂಪನ ಉಳಿದಿತ್ತು. ಇಂದಿಗೂ ಒಂದಂಶ ಉಳಿದೇ ಇದೆ. ಅದಾಗಿ ಐದು ವರ್ಷ ಕಳೆದಿದೆ. ಅಂದಿನಿಂದಲೂ ನಾವೂ ಈ ನೌಕರಿ, ಈ ಆಡಳಿತಾಧಿಕಾರದ ಜವಾಬ್ದಾರಿಯನ್ನೆಲ್ಲ ಬಿಟ್ಟು ಊರಿಗೆ ಬಂದು ಬಿಡು ಎನ್ನುತ್ತಿದ್ದೇವೆ. ಗೆಳೆಯರೂ ಹಾಗೇ ಹೇಳುತ್ತಿದ್ದಾರೆ. ಈಗ ಒಂದು ಜವಾಬ್ದಾರಿಯನ್ನು ಕಾಲವೇ ಕಡಿಮೆ ಮಾಡಿದೆ. ನಿವೃತ್ತಿ ಬಂದುಬಿಟ್ಟಿದೆ. ಇನ್ನೊಂದು ಜವಾಬ್ದಾರಿ ಅವನನ್ನು ತುಂಬಾ ದಣಿಸುತ್ತಿದೆ. ನಿಜಕ್ಕೂ ನಾವು ಚಿಂತೆಗೊಳಗಾಗಿದ್ದೇವೆ. ರಾಘಣ್ಣನ ಮೂಲಕ ಮಲ್ಲಾಡಿಹಳ್ಳಿಯಿಂದ ನಾವು ಪಡೆದಷ್ಟನ್ನೂ ಮರಳಿಸುವುದು ಖಂಡಿತ ಸಾಧ್ಯವಾಗದ ಮಾತು. ಆದಾಗ್ಯೂ ಆತನ ಈವರೆಗಿನ ನಿಸ್ಪೃಹ ಸೇವೆಯ ಮೂಲಕ ಒಂದಿಷ್ಟು ಕೃತಜ್ಞತೆಯನ್ನು ಸಲ್ಲಿಸಲು

ಸಾಧ್ಯವಾಗಿದೆ ಎಂದು ನಾವು  ನಂಬಿದ್ದೇವೆ. ಯಾರಾದರೂ ಆಡಳಿತಾಧಿಕಾರಿಯಾಗಿ ರಾಘಣ್ಣನಷ್ಟು– ಅಷ್ಟೇ ಏಕೆ –ಇನ್ನೂ ಚನ್ನಾಗಿ ಕಾರ್ಯನಿರ್ವಹಿಸಿಯಾರು; ನಿರ್ವಹಿಸಲಿ ಎಂಬ ಆಶಯ ನಮ್ಮದು. ಆದರೆ ರಾಘಣ್ಣನೇ ಮಾಡಬೇಕಾದ ಬರವಣಿಗೆಯ ಕಾಯಕವನ್ನು ಬೇರಾರೂ ಮಾಡಲು ಸಾಧ್ಯವಿಲ್ಲ. ಅಂತೆಯೇ ಈ ಸೇವೆಯಿಂದಲೂ ನಿವೃತ್ತಿ ಪಡೆದು ಬಂದು ಬಿಡು, ನಿನಗೆ ವಿಶ್ರಾಂತಿಯ ಅಗತ್ಯವಿದೆ ಎಂದು ನಾನು ಯಾವಾಗಲೂ ನೇರವಾಗಿ ಹೇಳುವುದನ್ನು ಇಂದು ಈ ಲೇಖನದ ಮೂಲಕವೂ ಹೇಳುತ್ತ ಇದನ್ನು ಮುಗಿಸುತ್ತಿದ್ದೇನೆ.